# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 178 Issue: 178 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 16.01.2025 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2



BOOK YOUR ADVERTISEMENTS TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
HAMPI TIMES No.1 LEADING VIJAYANAGARA District News Paper



|| ಶ್ರೀ ಗುರು ಬಸವಲಿಂಗಾಯ ನಮಃ ||

ಕಾಯಕಯೋಗಿ, ತ್ರಿವಿಧದಾಸೋಹಿ ಪೂಜ್ಯಶ್ರೀಮನ್ ಜಗದ್ಗುರು ಡಾ.ಸಂಗನಬಸವ ಮಹಾಸ್ವಾಮಿಗಳವರ ದಿವ್ಯಪ್ರಕಾಶನದಲ್ಲಿ
ಪೂಜ್ಯ ನಿರಂಜನ ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳವರ ಪಾವನಸಾನ್ನಿಧ್ಯದಲ್ಲಿ

ಶಿವಾನಭವ ಸಂಪದ - 1169

ದಿನಾಂಕ: 16-01-2025, ಗುರುವಾರ
ಸಂಜೆ: 7-00 ಗಂಟೆಗೆ

ವಿಷಯ: ಕನ್ನಡ ನಾಡು-ನುಡಿ, ಸಂಸ್ಕೃತಿಗೆ ತ್ಯಾಗವೀರ ಮಹಾದಾನಿ ಸಿರಸಂಗಿ ಶ್ರೀ ಲಿಂಗರಾಜ ದೇಸಾಯಿ ಅವರ ಕೊಡುಗೆ

ಸ್ಥಳ: ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನ ಮಠ, ಹೊಸಪೇಟೆ

ಉಪನ್ಯಾಸ: ಡಾ.ಅಕ್ಕಿ ಬಸವೇಶ. ಹ.ಬೊ.ಹಳ್ಳಿ

ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕು :
ಹರಿದು ಹೆದ್ದೊರೆಯು, ಕೆರೆ ತುಂಬಿದಂತಯ್ಯಾ
ನೆರೆಯದ ವಸ್ತು ನೆರೆವುದು ನೋಡಯ್ಯ,
ಅರಸು ಪರಿವಾರ ಕೈವಾರ ನೋಡಯ್ಯ.
ಪರಮ ನಿರಂಜನನ ಮರೆವ ಕಾಲಕ್ಕೆ
ತುಂಬಿದ ಹರವಿಯ ಕಲ್ಲು ಕೊಂಡಂತೆ, ಕೂಡಲಸಂಗಮದೇವಾ

ಸರ್ವ ಧರ್ಮಿಯರ ಬರವೆಮಗೆ ಪ್ರಾಣ ಜೀವಾಳವಯ್ಯಾ


ಮೈಕ್ರೋ ನ್ಯೂಸ್

## ವಿಜಯನಗರ ಜಿಲ್ಲಾ ಗ್ರಾಮ ಆಡಳಿತಾಧಿಕಾರಿಗಳ ಹುದ್ದೆ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಜಿಲ್ಲೆಯ ಕಂದಾಯ ಘಟಕದಲ್ಲಿ ಖಾಲಿ ಇರುವ 13 ಗ್ರಾಮ ಆಡಳಿತಾಧಿಕಾರಿಗಳ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ತಿಳಿಸಿದ್ದಾರೆ.



ವಿಜಯನಗರ ಜಿಲ್ಲೆಯಲ್ಲಿ ಖಾಲಿ ಇದ್ದ 13 ಗ್ರಾಮ ಆಡಳಿತಾಧಿಕಾರಿಗಳ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿ ರಾಜ್ಯ ಪರೀಕ್ಷಾ ಪ್ರಾಧಿಕಾರದ ಮೂಲಕ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಅರ್ಹರಾದ 264 ಅಭ್ಯರ್ಥಿಗಳ ಪೈಕಿ ಗಳಿಸಿದ ಅಂಕ ಹಾಗೂ ಮೀಸಲಾತಿಯನ್ವಯ 1;3 ರ ಅನುಪಾತದಲ್ಲಿ 37 ಅಭ್ಯರ್ಥಿಗಳ ಪರಿಶೀಲನಾ ಪಟ್ಟಿ ತಯಾರಿಸಿ ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲನೆ ನಡೆಸಿ ಹಾಜರಾದ 31 ಅಭ್ಯರ್ಥಿಗಳಲ್ಲಿ ಮೆರಿಟ್ ಮತ್ತು ರೋಸ್ಟರ್ ಆಧಾರದ ಮೇಲೆ 13 ಹುದ್ದೆಗಳಿಗೆ ತಾತ್ಕಾಲಿಕ ಆಯ್ಕೆ ಪಟ್ಟಿ ಹಾಗೂ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಜನವರಿ 15 ರಂದು ಜಿಲ್ಲಾ ವೆಬ್‌ಸೈಟ್ https;//vijayanagara.nic.in ರಲ್ಲಿ ಪ್ರಕಟಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.


ಈ ಬಾರಿ ಫಲಿತಾಂಶ ನಮ್ಮದೆ
SSLC ಮಾರ್ಗದರ್ಶಿಗಾಗಿ
ಭೇಟಿ ನೀಡಿ..
www.hampitimes.com
epaper.hampitimes.com


# ಭರವಸೆಯ ಬದುಕು ನಿಮ್ಮದಾಗಲಿ

## ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳ ಆಶೀರ್ವಚನ | ಅಜ್ಜನ ಜಾತ್ರೆ ಕಣ್ತುಂಬಿಕೊಂಡ ಲಕ್ಷಾಂತರ ಭಕ್ತರು

## ಎಲ್ಲವನ್ನು ಕೊಟ್ಟ ನಿಸರ್ಗ ಸಂತೋಷವಾಗಿದೆ | ತನಗೆ ಬೇಕಾದ್ದನ್ನು ಪಡೆದ ಮನುಷ್ಯ ದುಃಖದಲ್ಲಿದ್ದಾನೆ

■ ಹಂಪಿ ಟೈಮ್ಸ್ ಕೊಪ್ಪಳ

ಭೂತಾಯಿ ಆಹಾರವನ್ನು ನೀಡುತ್ತಾಳೆ. ಮನುಷ್ಯ ಸೇರಿದಂತೆ ಸಕಲ ಜೀವರಾಶಿಗಳಿಗೆ ಬೇಕಾದ ಗಾಳಿ, ಬೆಳಕು, ನೀರು ಯಾವುದೇ ಗ್ಯಾರಂಟಿಯನ್ನು ನಮ್ಮಿಂದ ಪಡೆಯದೆ ಭಗವಂತ ನಿಸರ್ಗದ ಮೂಲಕ ಎಲ್ಲವನ್ನು ಮನುಷ್ಯನಿಗೆ ಉಚಿತವಾಗಿ ಕರುಣಿಸಿದ್ದಾನೆ. ಭಗವಂತ ಕೊಟ್ಟಿರುವ ನೂರು ವರ್ಷದ ಬದುಕನ್ನು ಭಗವಂತ ಮೆಚ್ಚಿಕೊಳ್ಳುವಂತೆ ಬದುಕಬೇಕು ಎಂದು ಕೊಪ್ಪಳ ಶ್ರೀ ಗವಿಸಿದ್ಧೇಶ್ವರ ಶ್ರೀಗಳು ಹೇಳಿದರು.

ಕೊಪ್ಪಳ ಜಾತ್ರೆ ಚಾಲನೆ ನಂತರ ಮಾತನಾಡಿದರು. ಭಗವಂತನ ಮೆಚ್ಚಿಗೆಗೆ ಒಳಪಟ್ಟರೆ ಮತ್ತೊಮ್ಮೆ ಸುಖಕರ ಜೀವನ ದೊರೆಯಬಹುದು. ಮತ್ತೊಬ್ಬರ ಜೀವನದಲ್ಲಿ ಶಾಂತಿ, ನೆಮ್ಮದಿ ತುಂಬಲು ಕಾರಣರಾಗ ಬೇಕು. ಕೊಪ್ಪಳ ಜಾತ್ರೆಯಲ್ಲಿ ಯಾರು ಎಷ್ಟು ಏನು ಮಾಡಿದರು ಎಂಬುದೆ ಗೊತ್ತಾಗುವುದಿಲ್ಲ. ಅವರವರ ಸೇವೆ ಅವರನ್ನು ಕಾಪಾಡಲಿದೆ. ಜಾತ್ರೆಗೆ ಸೇರಿದ ಭಕ್ತಾಧಿಗಳಿಗೆ ಕೋಟಿ ಕೋಟಿ ನಮನಗಳು, ನಾಡಿನ ವಿವಿಧೆಡೆಯಿಂದ ವಿಐಪಿಗಳು ಕೊಪ್ಪಳ ಜಾತ್ರೆ ಭಕ್ತಸಮೂಹವನ್ನು ಕಣ್ತುಂಬಿಕೊಳ್ಳಲು ಬರುತ್ತಾರೆ. ಇಲ್ಲಿಯ ಜನರ ಭಕ್ತಿ, ಪ್ರೀತಿ ಮತ್ತು ಸೌಹಾರ್ದತೆಗೆ ಮಾರುಹೋಗುತ್ತಾರೆ. ಕೊಪ್ಪಳಕ್ಕೆ ಬಂದ ಭಕ್ತರು ಹಸಿವಿನಿಂದ ಹಿಂತಿರುಗಬಾರದೆಂದು ಲಕ್ಷಾಂತರ ಭಕ್ತರು ಸ್ವಯಂಪ್ರೇರಿತರಾಗಿ ದಾಸೋಹಕ್ಕೆ ಕೈಜೋಡಿಸಿದ್ದಾರೆ. ಹೋಳಿಗೆ, ಜಿಲೆಬಿ, ಅನ್ನ, ಸಾಂಬರ್, ಮಿರ್ಚಿ ಸೇರಿದಂತೆ ನಾನಾ ಬಗೆಯ ಆಹಾರಗಳನ್ನು ಸಿದ್ದಪಡಿಸಿ ಭಕ್ತರಿಗೆ ನೀಡಿ ಸೇವೆಗೈದಿರುವ ಸಕಲರಿಗೂ ಗವಿಸಿದ್ದೇಶ್ವರನ ಆಶೀರ್ವಾದವಿರಲಿ ಎಂದು ಆಶೀರ್ವದಿಸಿದರು. ತುಮಕೂರು ಸಿದ್ದಗಂಗ ಶ್ರೀಗಳು ಸೇರಿದಂತೆ ನಾಡಿನ ವಿವಿಧ ಮಠಗಳ ಶ್ರೀಗಳು ಆಶೀರ್ವಚನ ನೀಡಿದರು. ಲಕ್ಷಾಂತರ ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡು ಶ್ರೀಗವಿಸಿದ್ದೇಶ್ವರಸ್ವಾಮಿಗೆ ಭಕ್ತಿ ಸಮರ್ಪಿಸಿದರು.



ಚಿತ್ರ: ನಾಭಿರಾಜ್ ದಸ್ತೇನವರ್


ಹಂಪಿ ಟೈಮ್ಸ್
ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ–8
ದಿನಾಂಕ: 17–01–2025
ವಿಷಯ: ತೆರೆದ ಮತ್ತು ಮುಚ್ಚಿದ ಪತ್ರರಂಧ್ರದ ಅಂದವಾದ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ.
ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಹಿಸಲು ಮನವಿ.
10ನೇ ತರಗತಿ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.
ವಾಟ್ಸ್‌ಪ್ ನಂ: 99726 03099
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
94486 33038



# ಚಿತ್ರ ಬಿಡಿಸಲೆಂದೇ ಶಾಲೆಗೆ ಬಂದ ಕೆಲ ವಿದ್ಯಾರ್ಥಿಗಳು


## ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ–7ರ ಅತ್ಯುತ್ತಮ ಚಿತ್ರಗಳು | ಎಂ.ಚೈತ್ರ (ಪ್ರಥಮ), ಕೆ.ಮಣಿಕಂಠ (ದ್ವಿತೀಯ), ಪ್ರಿಯಾಂಕ (ತೃತೀಯ)


■ ಹಂಪಿ ಟೈಮ್ಸ್ ಹೊಸಪೇಟೆ

ವಿದ್ಯಾರ್ಥಿಗಳು ವಿಜ್ಞಾನ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳಿಕೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಹಂಪಿ ಟೈಮ್ಸ್ ಪತ್ರಿಕೆಯಿಂದ ನಡೆಸಲಾಗುತ್ತಿರುವ ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆಯಲ್ಲಿ ಅತ್ಯಂತ ಉತ್ಸುಕತೆಯಿಂದ ಪಾಳ್ಗುವುದರ ಜೊತೆಗೆ ಉತ್ತಮ ಚಿತ್ರ ಬಿಡಿಸುವುದನ್ನು ರೂಢಿಸಿಕೊಂಡು ಸ್ಪರ್ಧೆಯೊಡ್ಡುತ್ತಿರುವುದು ಶಿಕ್ಷಕರು ಮತ್ತು ಪಾಲಕರಲ್ಲಿ ಖುಷಿ ತಂದಿದೆ. ವಿಶೇಷವೆಂದರೆ ಶಾಲೆಯತ್ತ ಮುಖಮಾಡಲು ಹಿಂಜರಿಯುತ್ತಿದ್ದ ಕೆಲ ವಿದ್ಯಾರ್ಥಿಗಳು ಚಿತ್ರಬಿಡಿಸಲೆಂದು ಹಾಜರಾಗುತ್ತಿ ರುವುದನ್ನು ಕಂಡ ವಿದ್ಯಾರ್ಥಿಗಳು ಮತ್ತು ಶಿಕ್ಷಕರಲ್ಲಿ ಸಂತಸ ತಂದಿದೆ.

ಚಿತ್ರಸ್ಪರ್ಧೆ–7ರಲ್ಲಿ ಹೊಸಪೇಟೆ ತಾಲೂಕಿನ ಜಿ.,ನಾಗಲಾಪುರದ ಬಿ.ಆರ್.ಆರ್.ಜಿ.ಪ್ರೌಢಶಾಲೆ ವಿದ್ಯಾರ್ಥಿನಿ ಎಂ.ಚೈತ್ರ (ಪ್ರಥಮ), ಹೊಸಪೇಟೆ ಅನಂತಶಯನ 'ಗುಡಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಕೆ.ಮಣಿಕಂಠ (ದ್ವಿತೀಯ) ಹಾಗೂ ಹೊಸಪೇಟೆಯ ಸರ್ಕಾರಿ ಬಾಲಕಿಯರ ಪ್ರೌಢಶಾಲೆ (ಮಾ.ಪು) ವಿದ್ಯಾರ್ಥಿನಿ ಪ್ರಿಯಾಂಕ (ತೃತೀಯ) ಸ್ಥಾನ ಪಡೆದಿದ್ದಾರೆ ಎಂದು ಆಯ್ಕೆ ತಂಡದ ಮುಖ್ಯಸ್ಥ ಶಿವತನಯ ಎಸ್.ಸಿ. ತಿಳಿಸಿದ್ದಾರೆ. ಹೊಸಪೇಟೆ ತಾಲೂಕಿನ ವಿವಿಧ 17 ಶಾಲೆಗಳು, ಹ.ಬೊ.ಹಳ್ಳಿಯ 13 ಶಾಲೆ, ಹಡಗಲಿ–1, ಕೊಟ್ಟೂರು–1, ಹರಪನಹಳ್ಳಿ–2 ಹಾಗೂ ಶಿವಮೊಗ್ಗ, ಬಳ್ಳಾರಿಯಿಂದ ತಲಾ ಒಂದು ಶಾಲೆಗಳ ವಿದ್ಯಾರ್ಥಿಗಳು ಚಿತ್ರಸ್ಪರ್ಧೆ ಯಲ್ಲಿ ಭಾಗವಹಿಸಿದ್ದಾರೆ. ಶಾಲಾ ಹಂತದಲ್ಲಿ ಅತ್ಯುತ್ತಮ ಚಿತ್ರಗಳನ್ನು ಬಿಡಿಸಿ ವಿಜ್ಞಾನದಲ್ಲಿ ಆಸಕ್ತಿ ಹೆಚ್ಚಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ಹಂಪಿ ಟೈಮ್ಸ್ ಬಳಗ ಅಭಿನಂದಿಸಿದೆ. ವಿದ್ಯಾರ್ಥಿಗಳು ಸ್ವಯಂಪ್ರೇರಣೆಯಿಂದ ಭಾಗವಹಿಸಿದಾಗ ಮತ್ತಷ್ಟು ಪ್ರತಿಫಲ ಲಭಿಸದೆ.









ಎಂ. ಚೈತ್ರ
ಬಿ.ಆರ್.ಆರ್.ಜಿ ಪ್ರೌಢಶಾಲೆ
ಜಿ.ನಾಗಲಾಪುರ, ಹೊಸಪೇಟೆ ತಾ.
ಶಿಕ್ಷಕರು:ಚನ್ನಬಸಪ್ಪ. ಕೆ.ಬಿ.



ಕೆ.ಮಣಿಕಂಠ
ಸರ್ಕಾರಿ ಪ್ರೌಢಶಾಲೆ,
ಅನಂತಶಯನ ಗುಡಿ
ಹೊಸಪೇಟೆ
ಶಿಕ್ಷಕರು–ಗಂಗಮ್ಮ



ಪ್ರಿಯಾಂಕ
ಸರಕಾರಿ ಬಾಲಕಿಯರ ಪ್ರೌಢಶಾಲೆ (ಮಾ.ಪು)
ಹೊಸಪೇಟೆ.
ಶಿಕ್ಷಕರು – ಜಿ.ರವೀಂದ್ರ


ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!
HAMPI TIMES VIJAYANAGARA
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಚಿಕ್ಕ ಮೊತ್ತ ದೊಡ್ಡ ಜಾಹೀರಾತು
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಹಂಪಿ ಟೈಮ್ಸ್ ಇ-ಪೇಪರ್
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

## ಸ್ಟುಡೆಂಟ್ ಕಾಲಂ

# ಅಕ್ಷರಗಳ ಆಟದ ಮೈದಾನ



ಚಿತ್ರಕಲ್ಲು ಎಂಬ ಒಂದು ಗ್ರಾಮ. ಅಲ್ಲಿ ಸುಂದರವಾದ ಸರಸ್ವತಿ ದೇವಿಯಂತೆ ಕಾಣುವ ಶ್ರೀಮತಿ ರಮಾ ಅವರು ಅಲ್ಲಿನ ಶಾಲೆಯಲ್ಲಿ ಶಿಕ್ಷಕಿಯಾಗಿದ್ದರು. ಅವರ ತರಗತಿಗೆ ಹೋಗುವ ಮಕ್ಕಳು ಪಾಠವನ್ನು ಕೇವಲ ಪಾಠವೆಂದು ನೋಡುತ್ತಿರಲಿಲ್ಲ. ಪಾಠವೆಂಬುದು ಅವರಿಗೆ ಒಂದು ಆಟದ ಮೈದಾನವಾಗಿತ್ತು. ಅಕ್ಷರಗಳು ಅವರ ಕೈಯಲ್ಲಿ ಜೀವ ಪಡೆದು ನೃತ್ಯ ಮಾಡುತ್ತಿದ್ದವು.

ರಮಾ ಅವರು ಪ್ರತಿಯೊಬ್ಬ ಮಗುವಿನೊಂದಿಗೆ ವಿಶೇಷವಾಗಿ ವರ್ತಿಸುತ್ತಿದ್ದರು. ಓದಲು ಕಷ್ಟಪಡುವ ಮಕ್ಕಳಿಗೆ ಆಸಕ್ತಿದಾಯಕ ಕಥೆಗಳ ಮೂಲಕ ಅಕ್ಷರಗಳನ್ನು ಹೇಳಿಕೊಡುತ್ತಿದ್ದರು. ಗಣಿತವನ್ನು ಇಷ್ಟಪಡದ ಮಕ್ಕಳಿಗೆ ಆಟದ ಮೂಲಕ ಸಂಖ್ಯೆಗಳನ್ನು ಕಲಿಸುತ್ತಿದ್ದರು.

ಒಂದು ದಿನ ರಾಮು ಎಂಬ ಹುಡುಗ ತರಗತಿಯಲ್ಲಿ ತುಂಬಾ ದುಃಖಿತನಾಗಿದ್ದ. ಅವನಿಗೆ ಓದಲು ಬರದೇ ಇದ್ದುದರಿಂದ ಇತರ ಮಕ್ಕಳು ಅವನನ್ನು ನಗೆಪಾಟಲಿಗೆ ಮಾಡುತ್ತಿದ್ದರು. ರಮಾ ಅವರು ರಾಮುವಿನ ಬಳಿ ಹೋಗಿ, 'ರಾಮು, ನೀನು ಬಹಳ ಬುದ್ಧಿವಂತ ಹುಡುಗ. ಸ್ವಲ್ಪ ಸಮಯ ತೆಗೆದುಕೊಂಡು ಪ್ರಯತ್ನಿಸು, ನೀನು ಖಂಡಿತ ಓದಲು ಕಲಿಯುತ್ತೀಯ' ಎಂದು ಪ್ರೋತ್ಸಾಹಿಸಿದರು. ಅದಾದ ಮೇಲೆ ರಮಾ ಅವರು ರಾಮುವಿಗೆ ಚಿತ್ರಗಳೊಂದಿಗೆ ಅಕ್ಷರಗಳನ್ನು ಹೇಳಿಕೊಟ್ಟರು. ಕೆಲವೇ ದಿನಗಳಲ್ಲಿ ರಾಮು ಓದಲು ಕಲಿತು ತುಂಬಾ ಸಂತೋಷಪಟ್ಟ.

ರಮಾ ಅವರಂತಹ ಶಿಕ್ಷಕರು ಮಕ್ಕಳ ಜೀವನದಲ್ಲಿ ಬೆಳಕು ತರುತ್ತಾರೆ. ಅವರು ಮಕ್ಕಳನ್ನು ಕೇವಲ ವಿದ್ಯಾರ್ಥಿಗಳಾಗಿ ನೋಡುವುದಿಲ್ಲ. ಆದರೆ ಒಬ್ಬ ಮನುಷ್ಯನನ್ನಾಗಿ ನೋಡುತ್ತಾರೆ. ಅವರ ಪ್ರೋತ್ಸಾಹ ಮತ್ತು ಪ್ರೀತಿಯಿಂದ ಮಕ್ಕಳು ತಮ್ಮ ಜೀವನದಲ್ಲಿ ದೊಡ್ಡ ಗುರಿಗಳನ್ನು ಸಾಧಿಸಲು ಪ್ರೇರಿತರಾಗುತ್ತಾರೆ.

**– ಕೆ.ಕಲ್ಯಾಣ ಕುಮಾರ್. 9ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ ಬಸರಕೋಡು, ಹಗರಿಬೊಮ್ಮನಹಳ್ಳಿ(ತಾ)

## ಪ್ರೀತಿಯ ವಿದ್ಯಾರ್ಥಿಗಳೇ ನಿವೂ ಬರೆಯಿರಿ

ಪ್ರೀತಿಯ ವಿದ್ಯಾರ್ಥಿಗಳೇ ನಿಮಗಾಗಿ ನಿಮ್ಮ ಬರವಣಿಗೆ ಕೌಶಲ ಹೆಚ್ಚಿಸಿಕೊಳ್ಳಲು **ಹಂಪಿ ಟೈಮ್ಸ್ ಸ್ಟುಡೆಂಟ್ ಕಾಲಂ ವೇದಿಕೆ** ಕಲ್ಪಿಸಿದೆ. ನೀವು ಸಣ್ಣ ಸಣ್ಣ ಕಥೆ, ಕವನಗಳನ್ನು 200 ಪದಗಳಿಗೆ ಮೀರದಂತೆ ಬರೆಯಬಹುದು. ಇಂದೇ ಆರಂಭಿಸಿ ನೀವು ಭವಿಷ್ಯದಲ್ಲಿ ಲೇಖಕರಾಗಿ ಬೆಳೆಯಿರಿ.

ಇ–ಮೇಲ್:hampitimes@gmail.com
M: 94486 33038

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

**ಒಂದು ಸಲ ಉಂಡವ ಯೋಗಿ, ಎರಡು ಸಲ ಉಂಡವ ಭೋಗಿ, ಮೂರು ಸಲ ಉಂಡವ ಭವರೋಗಿ, ನಾಲ್ಕು ಸಲ ಉಂಡವನ್ನ ಹೊತ್ತುಕೊಂಡು ಹೋಗಿ**

# ನಿಮ್ಮ ಆರೋಗ್ಯದ ಗುಟ್ಟೇನು?




ನಿಮ್ಮ ಆರೋಗ್ಯದ ಗುಟ್ಟೇನು? ಎಂಬ ಪ್ರಶ್ನೆಯನ್ನು ಎಲ್ಲರೂ ಕೇಳಿದ್ದೀರಿ. ಈ ಪ್ರಶ್ನೆ ಬಹುತೇಕ ಫಿಲಂ ಸ್ಟಾರ್‌ಗಳು, ನಟ–ನಟಿಯರು ಇರುವ ಕಡೆ ಹೆಚ್ಚಾಗಿ ಕೇಳಿ ಬರುತ್ತದೆ. ಸಾಮಾನ್ಯ ಜನರಲ್ಲಿ ಆರೋಗ್ಯದ ಬಗ್ಗೆ ಇರುವ ಪರಿಕಲ್ಪನೆ. ಅವರ ಆಹಾರ ಪದ್ಧತಿ, ಅವರು ಎದುರಿಸುತ್ತಿರುವ ಆರೋಗ್ಯ ಸಮಸ್ಯೆಗಳು ಇವೆಲ್ಲವುಗಳಿಗೆ ಉತ್ತರ ಹುಡುಕುವ ಪ್ರಯತ್ನ ಮಾಡೋಣ. ದೀಪಾವಳಿ ಹಬ್ಬಕ್ಕೆ ಹಳ್ಳಿಗೆ ಹೋಗಿದ್ದೆ. ಸಂಜೆ ಓಣಿಯ ಎಲ್ಲಾ ಸ್ನೇಹಿತರು ಮಾತನಾಡುತ್ತಾ ಕುಳಿತಾಗ ತಿನ್ನಲು ಏನಾದರೂ ಮಾಡಬೇಕೆಂದು ಯೋಚಿಸಿದೆ. ಆದರೆ ಅವರೆಲ್ಲರೂ ಮನೆಯಲ್ಲಿ ಮಾಡುವ ಅವಶ್ಯಕತೆ ಇಲ್ಲ. ಊರಲ್ಲಿ ಸಾಕಷ್ಟು ಫಾಸ್ಟ್ ಫುಡ್ ಸೆಂಟರ್‌ಗಳಿವೆ. ಅಲ್ಲಿಂದಲೇ ತರಬಹುದು ಎಂದು ಬಹಳ ಖುಷಿಯಿಂದ ಅವರು ಹೇಳಿದಾಗ ನಾನು ಏನು ಉತ್ತರಿಸಲಾಗದೆ ಸುಮ್ಮನಾದೆ. ಅವರ ಪ್ರಕಾರ ಇದು ಅಭಿವೃದ್ಧಿಯ ಸಂಕೇತ. ಇತ್ತೀಚಿಗೆ ನಗರಗಳ ಪ್ರಮುಖ ರಸ್ತೆಗಳ ಎರಡು ಬದಿಗಳಲ್ಲಿ ಕಣ್ಣಿಗೆ ಬೀಳುತ್ತಿರುವುದು ಈ ಫಾಸ್ಟ್ ಫುಡ್ ಸೆಂಟರ್, ಚಾಟ್ ಸೆಂಟರ್, ಟಿಫಿನ್ ಸೆಂಟರ್‌ಗಳು ಇವುಗಳ ಮುಂದೆ ಮುಗಿಬೀಳುವ ಜನರು. ರಸ್ತೆ ಬದಿಯ ವ್ಯಾಪಾರಿ ಕೋಟ್ಯಾಧಿಪತಿ ಆಗಿರುವ ಉದಾಹರಣೆಗಳು ಕಣ್ಮುಂದೆ ಇವೆ. ಆದರೆ ಆರೋಗ್ಯದ ಗತಿ ಏನು? ಆರೋಗ್ಯವೇ ಭಾಗ್ಯ ಎನ್ನುವ ಮಾತು ಈಗ ಭಾಗ್ಯವಂತರಿಗೆ ಮಾತ್ರ ಆರೋಗ್ಯ ಎನ್ನುವಂತಾಗಿದೆ. ಒಂದೆಡೆ ಪಿಜ್ಜಾ, ಬರ್ಗರ್, ಬ್ರೆಡ್ ಸ್ಯಾಂಡ್ ವಿಚ್, ಚೈನೀಸ್, ನೂಡಲ್ಸ್ ಕಣ್ಮನ ಸೆಳೆಯುವ ಬಣ್ಣ ಬಣ್ಣದ ತಿಂಡಿಗಳು ಒಂದೆಡೆ ಇವುಗಳ ಉಡುಗೊರೆಯಾಗಿ ಅತಿಯಾದ ಬೊಜ್ಜು, ಅಸಿಡಿಟಿ, ಥೈರಾಯಿಡ್, ಬಿಪಿ, ಶುಗರ್ ನಾನಾ ವಿಧದ ಜೀವನದ ಜೊತೆಯಾಗಿ ಬರುವ ರೋಗಗಳು. ಈ ಎರಡು ಪ್ರಕ್ರಿಯೆಗಳು ಸಮಾನ ಗತಿಯಲ್ಲಿ ಚಲಿಸುತ್ತಿವೆ. ಪ್ರಸ್ತುತ ಪರಿಸ್ಥಿತಿ ಎಷ್ಟು ಕೈಮೀರಿದೆ ಅಂದರೆ ವೃದ್ಧ ತಂದೆ–ತಾಯಿಂದಿರೇ ತಮ್ಮ ಮಕ್ಕಳ ಅಂತ್ಯಸಂಸ್ಕಾರ ಮಾಡುವ ದಾರುಣ ಸ್ಥಿತಿ ಎದುರಾಗುತ್ತಿದೆ. ಇನ್ನಾದರೂ ಆರೋಗ್ಯದ ಕಾಳಜಿ ಅವಶ್ಯವಾಗಿದೆ. 21ನೇ ಶತ ಮಾನದಲ್ಲಿ ಯೂಟ್ಯೂಬ್, ಮೊಬೈಲ್ ಡಾಕ್ಟರ್ ಸಲಹೆಗಳು ವಿಡಿಯೋಗಳು, ಸೋಷಿಯಲ್ ಮೀಡಿಯಾ ನೋಡಿ ಆಹಾರ ಪದ್ಧತಿ, ಸ್ವಚಿಕಿತ್ಸೆ ಮಾಡಿಕೊಳ್ಳುವ ಹೊಸ ರೂಢಿ ಬೆಳೆಯುತ್ತಿದೆ. ಆದರೆ ನಮ್ಮ ಶರಣರು 12ನೇ ಶತಮಾನದಲ್ಲಿ ಆರೋಗ್ಯದ ಗುಟ್ಟನ್ನು ತಮ್ಮ ವಚನಗಳಲ್ಲಿ ಬರೆದಿಟ್ಟಿದ್ದಾರೆ. ಒಂದೊಂದು ವಚನಗಳು ವೈದ್ಯರು ಬರೆದಿಟ್ಟ ಔಷಧಿ ಚೀಟಿಗಳಂತಿವೆ. ವಿಶ್ವ ಆರೋಗ್ಯ ಸಂಸ್ಥೆ ಹೇಳುವಂತೆ ಆರೋಗ್ಯಕರ ದೇಹದಲ್ಲಿ ಆರೋಗ್ಯಕರ ಮನಸ್ಸಿರುತ್ತದೆ ಎಂಬ ಮಾತಿನಂತೆ ಪ್ರತಿನಿತ್ಯ ವಚನಗಳನ್ನು ಮಾತ್ರೆಗಳಂತೆ ಅರಿತು ಅಳವಡಿಸಿಕೊಂಡಾಗ ಆರೋಗ್ಯ ಭಾಗ್ಯ ನಮ್ಮದಾಗುತ್ತದೆ. ಶರಣೆ ಅಕ್ಕಮಹಾದೇವಿ ಆಹಾರವನ್ನು ಸೇವಿಸುವುದರ ಮಹತ್ವವನ್ನು ಹೀಗೆ ತಿಳಿಸಿದ್ದಾಳೆ

**"ಆಹಾರವ ಕಿರಿದು ಮಾಡಿರಣ್ಣಾ, ಆಹಾರವ ಕಿರಿದು ಮಾಡಿ**
**ಆಹಾರದಿಂದ ವ್ಯಾಧಿ ಹಬ್ಬಿ ಬಲಿವುದಯ್ಯಾ**
**ಆಹಾರದಿಂ ನಿದ್ರೆ, ನಿದ್ರೆಯಿಂ ತಾಮಸ, ಅಜ್ಞಾನ, ಮೈಮರಹು,**
**ಅಜ್ಞಾನದಿಂ ಕಾಮವಿಕಾರ ಹೆಚ್ಚಿ,**
**ಕಾಯವಿಕಾರ, ಮನೋವಿಕಾರ, ಇಂದ್ರಿಯ ವಿಕಾರ, ಭಾವವಿಕಾರ,**
**ವಾಯುವಿಕಾರವನ್ನುಂಟು ಮಾಡಿ**
**ಸೃಷ್ಟಿಗೆ ಸಹದಾದ ಕಾರಣ ಕಾಯದ ಅತಿ ಪೋಷಣೆ ಬೇಡ**
**ಅತಿ ಪೋಷಣೆ ಮೃತ್ಯುವೆಂದುದು**
**ಜಪ ತಪ ಧ್ಯಾನ ಧಾರಣ ಪೂಜೆಗೆ ಸೂಕ್ಷ್ಮದಿಂ ತನು ಮಾತ್ರವಿದ್ದರೆ ಸಾಲದೇ?**
**ತನು ಪೋಷಿಸುವ ಆಸೆಯ ತಿತ್ತಕ್ಕೆ ವಿಘ್ನವೆಂದುದು.**
**ತನು ಪೋಷಣೆಯಿಂದ ತಾಮಸ ಹೆಚ್ಚಿ, ಅಜ್ಞಾನದಿಂ ವಿರಕ್ತಿ ಹಾನಿ,**
**ಅರಿವು ನಷ್ಟ ಪರವು ದೂರ,**
**ನಿರಕೆ ನಿಲವಿಲ್ಲದ ಕಾರಣ,**
**ಚೆನ್ನಮಲ್ಲಿಕಾರ್ಜುನ ನೊಲಿಸಬಂದ ಕಾಯವ ಕೆಡಿಸದೆ ಉಳಿಸಿಕೊಳ್ಳಿರಯ್ಯಾ.**



ರೇಖಾ ಪಾಟೀಲ
ಲೇಖಕಿ, ರಾಯಚೂರು

Scan For Digital Colourful
HAMPI TIMES E-paper

ಅಕ್ಕನ ಈ ಅರ್ಥಗರ್ಭಿತ ವಚನದಲ್ಲಿ ಇಂದಿನ ಆಧುನಿಕ ಜೀವನದಲ್ಲಿ ಮಿತಿಮೀರಿ ತಿನ್ನುವುದರ ದುಷ್ಪರಿಣಾಮಗಳನ್ನು ಈ 800 ವರ್ಷಗಳ ಹಿಂದೆಯೇ ತಿಳಿಸಿದ್ದಾರೆ ಅತಿ ಪೋಷಣೆಯಿಂದ ಆಗುವ ಅನಾಹುತಗಳ ಚಿತ್ರಣವಿದೆ. ಭಗವಂತನನ್ನು ಒಲಿಸಿಕೊಳ್ಳಲು ಇರುವ ದೇಹವನ್ನು ಕೆಡಿಸಿಕೊಳ್ಳದೆ ಉಳಿಸಿಕೊಳ್ಳಿ ಎಂದು ಅಕ್ಕ ಎಚ್ಚರಿಸಿದ್ದಾಳೆ. ಬಾಯಿ ರುಚಿಯ ಆಸೆಗೆ ತಿಂದು ಕಾಯಿಲೆ ತರಿಸಿಕೊಂಡು ಕಷ್ಟಕ್ಕೆ ಸಿಕ್ಕಿಕೊಳ್ಳುವವರಿಗೆ ವೈದ್ಯ ಸಂಗಣ್ಣ ಹೀಗೆ ಹೇಳುತ್ತಾನೆ.



ವಚನೋತ್ಸಾಹ

"ಜಿಹ್ವೇಂದ್ರಿಯ ಎಂಬ ರೋಗ ಬಾಯಲ್ಲಿ ಹುಟ್ಟಿ
ಗುಹ್ಯೇಂದ್ರಿಯವೆಂಬ ರೋಗ ಚಿತ್ತದಲ್ಲಿ ತತ್ತರಿಸುತ್ತಿದೆ ನೋಡ.
ಆಸೆಯೆಂಬ ರೋಗ ಸರ್ವಾಂಗದಲ್ಲಿ ಹೊಕ್ಕು
ಸರ್ವರಿಗೆಲ್ಲಕ್ಕೂ ನಿರೋಗವಾಗುವುದಕ್ಕೊಂದು ಮದ್ದುಂಟು."

ಅಂದರೆ ನಾಲಿಗೆರುಚಿ ಹೆಚ್ಚಿದಷ್ಟು ರೋಗವು ಬಾಯಲ್ಲಿ ಹುಟ್ಟುತ್ತದೆ ರೋಗ ಚಿತ್ತದಲ್ಲಿ ತತ್ತರಿಸುತ್ತದೆ ಹಾಗಾಗಿ ಆಸೆ ಎನ್ನುವ ರೋಗ ದೇಹದ ಎಲ್ಲೆಡೆ ಆವರಿಸುವುದನ್ನು ತಡೆಯಲು ಮದ್ದನ್ನು ಹೇಳುತ್ತಾನೆ. ಅದು ರೋಗ ಬಂದ ಮೇಲೆ ವಾಸಿ ಮಾಡಿಕೊಳ್ಳುವುದಕ್ಕಿಂತ ರೋಗ ಬರದಂತೆ ಎಚ್ಚರ ವಹಿಸುವುದು ರೋಗ ನಿರೋಧವಾಗುವುದಕ್ಕೆ ಮದ್ದು ಎಂದು ಹೇಳಿದ್ದಾರೆ.

ರುಚಿಯಾಗಿದೆ ಎಂದು ಪದೇಪದೇ ತಿನ್ನುವುದು ಒಳ್ಳೆಯದಲ್ಲವೆಂದು ಅದರಿಂದಾಗುವ ಅನಾಹುತಗಳ ಬಗ್ಗೆ ಸರ್ವಜ್ಞ ಮಾರ್ಮಿಕವಾಗಿ ಹೀಗೆ ಹೇಳುತ್ತಾನೆ.

**ಒಂದು ಸಲ ಉಂಡವ ಯೋಗಿ, ಎರಡು ಸಲ ಉಂಡವ ಭೋಗಿ,**
**ಮೂರು ಸಲ ಉಂಡವ ಭವರೋಗಿ**
**ನಾಲ್ಕು ಸಲ ಉಂಡವನ್ನ ಹೊತ್ತುಕೊಂಡು ಹೋಗಿ**

ಅಷ್ಟೇ ಅಲ್ಲ ಯಾವ ಆಹಾರ ಎಷ್ಟು ತೆಗೆದುಕೊಳ್ಳಬೇಕು ಆರೋಗ್ಯವಂತರಾಗಿ ಗಟ್ಟಿಯಾಗಿ ಇರಬೇಕೆಂದರೆ ಏನು ತಿನ್ನಬೇಕೆಂದು ಬಹಳ ಸುಂದರವಾಗಿ ಸರ್ವಜ್ಞ ಹೇಳುತ್ತಾನೆ.

ಜೋಳವನ್ನು ತಿಂದವನು ತೋಳದಂತಾಗುವನು ಬೇಳೆ ಬೆಲ್ಲಗಳುಂಬುವನು ಬಹುಕಾಲ ಬಾಳುವನು ಎಂಬ ಮಾತು ಮತ್ತೊಂದು ವಚನದಲ್ಲಿ

ಹಸಿಯದಿರೆ ಉಣಬೇಡ. ಹಸಿದು ಮತ್ತಿರಬೇಡ.
ಬಿಸಿ ಬೇಡ. ತಂಗಳುಣಬೇಡ.
ವೈದ್ಯನ ಬೆಸಸಲೇ ಬೇಡ. ಸರ್ವಜ್ಞ, ಹೀಗೆ ಊಟ ಬಲ್ಲವನಿಗೆ ರೋಗವಿಲ್ಲ ಎನ್ನುವುದಕ್ಕೆ ಈ ವಚನ ಕನ್ನಡಿಯಂತಿದೆ

ಶರಣ ಸಂಸ್ಕೃತಿಗೆ ಅನುಗುಣವಾಗಿ ಪವಿತ್ರವಾದ ವೈದ್ಯ ವೃತ್ತಿ ಇಂದು ವ್ಯಾಪಾರಿಕರಣಗೊಂಡಿದೆ. ಸಮಾಜದಲ್ಲಿ ಅನಾರೋಗ್ಯ ಹೆಚ್ಚುತ್ತಿದೆ. ಹೃದಯಾಘಾತ ಕ್ಯಾನ್ಸರ್ ರಸ್ತೆ ಅಪಘಾತಗಳನ್ನು ಬಿಟ್ಟರೆ ಆಲಸಿಗಳಾಗಿ ಐಷಾರಾಮಿ ಜೀವನ ನಡೆಸುವುದರಿಂದ ರೋಗಗಳು ಬಂದು ಸಾವು ಸನ್ನಿಹಿತವಾಗುತ್ತಿದೆ. ಐಷಾರಾಮಿ ಜೀವನ ನಡೆಸಿ ಕಾಯಕ ಮಾಡದೆ ಕೈಲಾಸ ಸೇರುವುದಕ್ಕಿಂತ ಶ್ರಮಪಟ್ಟು ಮೈಬಗ್ಗಿಸಿ ಕಾಯಕವೇ ಕೈಲಾಸವೆಂದು ದುಡಿದರೆ ಸಾವು ದೂರವಾದೀತು.

ನಿರೀಕ್ಷೆಗೂ ಮೀರಿ ರೋಗಗಳನ್ನು ಎದುರಿಸುತ್ತಿರುವ ನಾವು ಡಾಕ್ಟ್ರೇ ಏನಾದರೂ ಮಾಡಿ ಜೀವ ಉಳಿಸಿ, ನೀವೇ ದೇವರು ಎನ್ನುವಂತಾಗಿದೆ. ಎಲ್ಲರಂತೆ ಮನುಷ್ಯರಾದ ವೈದ್ಯರು ಹೆಚ್ಚೆಂದರೆ ತಾತ್ಕಾಲಿಕ ನೋವು ಕಡಿಮೆಯಾಗುವ ಔಷಧಿ ಕೊಡಬಹುದು. ರೋಗಿ ಚಡಪಡಿಸುವುದನ್ನು ಸಾಯುವುದನ್ನು ತಪ್ಪಿಸಲು ಆಗುವುದಿಲ್ಲ.

ನಾನಾ ರೋಗಗಳು ಬಂದು ದೇಹವ ಹಿಡಿದಲ್ಲಿ
ಶಿವಾರ್ಚನೆಯ ಬೆರಕೊಳ್ಳಿ
ಸಕಲ ಪುಷ್ಪಗಳಿಂದ ಪೂಜೆಯ ಮಾಡಿಕೊಳ್ಳಿ
ಪಂಚಾಕ್ಷರಿ ಪ್ರಣಮವ ತಪ್ಪದೇ ತ್ರಿಸಂಧಿಯಲ್ಲಿ ನೆನೆಹುಗೊಳ್ಳಿ

ಇದರಿಂದ ರುಜೆ ದರ್ಪಗೆಡಗು ವೈದ್ಯ ಸಂಗಣ್ಣನ ಈ ವಚನ ರೋಗಗಳಿಂದ ಬಳಲುತ್ತಾ ಕೊನೆಗಾಲದಲ್ಲಿ ಏನು ಮಾಡಬೇಕೆಂದು ಸ್ಪಷ್ಟವಾಗಿ ಹೇಳಿದ್ದಾನೆ ಅಂದರೆ ದೇವರ ಪೂಜೆಯಿಂದ ರೋಗಿಯ ಆತ್ಮಬಲ ಹೆಚ್ಚಾಗಿ ಮನಸ್ಸಿಗೆ ಶಾಂತಿ ಸಿಕ್ಕು ಆ ರೋಗದ ದರ್ಪ ಕಡಿಮೆಯಾಗುತ್ತದೆ. ಎಂಬ ಸತ್ಯವನ್ನು ಸಾರಿದ್ದಾನೆ.

ಹೀಗೆ ಶರಣ ಸಂಸ್ಕೃತಿಯ ವಿರುದ್ಧವಾಗಿ ಆಸೆ ಆಮಿಷ ಬದಲಾದ ಆರ್ಥಿಕ ಪದ್ಧತಿಯಿಂದ ಉಂಟಾದ ಅನಾರೋಗ್ಯವನ್ನು ತಡೆಗಟ್ಟಿ ಸಾಮಾಜಿಕ ಆರ್ಥಿಕ ಫಲಕಾರಿ ಜೀವನ ನಡೆಸುವ ಸಾಮರ್ಥ್ಯ ಪಡೆದುಕೊಂಡು ಆರೋಗ್ಯವಂತ ಜೀವನ ನಡೆಸಬೇಕೆಂದರೆ ಶರಣರ ಸಂದೇಶ ಅರಿಯಬೇಕು. ಕಾಯಕವೇ ಕೈಲಾಸವೆಂದು ದುಡಿಯಬೇಕು. ಆರೋಗ್ಯಕರ ಜೀವನಕ್ಕೆ ಶರಣರ ಸಂದೇಶ ಸಂಜೀವಿನಿಯಾಗಿದೆ. ಸತ್ಯ ಶುದ್ಧ ಮನಸ್ಸಿನಿಂದ ದೈವೀ ಸ್ವರೂಪವಾದ ಸಮಾಜ ಸೇವೆಯನ್ನು ಮಾಡುವುದಕ್ಕಿಂತ ಆರೋಗ್ಯಕರ ಜೀವನ ಜಗತ್ತಿನಲ್ಲಿ ಇನ್ನೊಂದಿಲ್ಲ. ಎಂದು ನುಡಿದಂತೆ ನಡೆದು ಜಗತ್ತಿಗೆ ತೋರಿಸಬೇಕು.

# ಜಾತಿಗಣತಿ ವರದಿ ವಿರೋಧಿಸುವುದು ಅನವಶ್ಯಕ

## ಸಿಎಂ ಸಿದ್ದರಾಮಯ್ಯ ಹೇಳಿಕೆ | ಈ ಸಂಪುಟಸಭೆಯಲ್ಲಿ ಜಾತಿ ಗಣತಿ ವರದಿ ಮಂಡಿಸಲಾಗುವುದಿಲ್ಲ | ಮುಂದಿನ ಸಂಪುಟ ಸಭೆಯಲ್ಲಿ ತೀರ್ಮಾನ



**ಹಂಪಿ ಟೈಮ್ಸ್ ನವದೆಹಲಿ:**
ಜಾತಿಗಣತಿ ವರದಿಯಲ್ಲಿರುವ ಅಂಕಿಅಂಶ ಇನ್ನೂ ಸಾರ್ವಜನಿಕವಾಗದೇ, ಊಹಾಪೋಹಗಳಾಗಿರುವುದರಿಂದ, ಈ ವಿಚಾರದ ಬಗ್ಗೆ ವಿರೋಧ ಅನವಶ್ಯಕ. ನಾಳೆ ನಡೆಯುವ ಸಂಪುಟಸಭೆಯಲ್ಲಿ ಜಾತಿ ಗಣತಿ ವರದಿಯ ವಿಷಯವನ್ನು ಮಂಡಿಸಲಾಗುವುದಿಲ್ಲ. ಮುಂದಿನ ಸಂಪುಟ ಸಭೆಯಲ್ಲಿ ವಿಷಯ ಮಂಡಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಬುಧವಾರ ನವದೆಹಲಿಯಲ್ಲಿ ಉದ್ಘಾಟನೆಗೆ ಸಿದ್ದವಾಗಿರುವ ಕನ್ನಡ ಭವನದ ನೂತನ ಕಟ್ಟಡವನ್ನು ವೀಕ್ಷಿಸಿದ ನಂತರ ಜಾತಿ ಗಣತಿ ವರದಿಯ ಜಾರಿ ಬಗ್ಗೆ ಉತ್ತರಿಸುತ್ತಾ ಮಾಧ್ಯಮದವರೊಂದಿಗೆ ಮಾತನಾಡಿದರು.

ಎಐಸಿಸಿ ಕಚೇರಿ ಉದ್ಘಾಟನೆ

ಎಐಸಿಸಿ ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಲೋಕಸಭಾ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರ ಭಾಷಣ ಉತ್ತಮವಾಗಿತ್ತು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ಶಂಕುಸ್ಥಾಪನೆಗೊಂಡಿದ್ದ ಕಟ್ಟಡ , ಇಂದು ಸುಸಜ್ಜಿತ ಕಟ್ಟಡವಾಗಿ ಉದ್ಘಾಟನೆಗೊಂಡಿದೆ ಎಂದು ತಿಳಿಸಿದರು.

**ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲಿಲ್ಲ**

ಆರ್ ಎಸ್ ಎಸ್ ಪ್ರಮುಖ ಮೋಹನ್ ಭಾಗವತ್ ಅವರು ಆಯೋಧ್ಯೆಯ ರಾಮ ಮಂದಿರ ಪ್ರಾರಂಭವಾದ ದಿನ ದೇಶಕ್ಕೆ ನಿಜಅರ್ಥದಲ್ಲಿ ಸ್ವಾತಂತ್ರ್ಯ ಲಭಿಸಿದೆ ಎಂಬ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಈ ಬಗ್ಗೆ ರಾಹುಲ್ ಗಾಂಧಿಯವರು ತಮ್ಮ ಭಾಷಣದಲ್ಲಿಯೂ ಪ್ರಸ್ತಾಪಿಸಿದ್ದರು. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸದೇ ಆರ್ ಎಸ್ ಎಸ್ ಹಾಗೂ ಬಿಜೆಪಿಯವರು ಬ್ರಿಟೀಷರೊಂದಿಗೆ ಶಾಮೀಲಾಗಿದ್ದರು. ಮೋಹನ್ ಭಾಗವತರ ಹೇಳಿಕೆ ಸರಿಯಾದುದಲ್ಲ ಎಂದರು.

**ಕೆಪಿಸಿಸಿ ಅಧ್ಯಕ್ಷರ ಬದಲಾವಣೆ– ವರಿಷ್ಠರ ತೀರ್ಮಾನ ಅಂತಿಮ**

ಸಚಿವ ಸತೀಶ್ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷ ಬದಲಾಗಬೇಕು ಎಂದು ಅಭಿಪ್ರಾಯಪಟ್ಟಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಈ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನ ತೆಗೆದುಕೊಳ್ಳಲಿದ್ದಾರೆ. ಅವರ ತೀರ್ಮಾನವೇ ಅಂತಿಮ ಎಂದು ತಿಳಿಸಿದರು.

**ಹಂತ ಹಂತವಾಗಿ ಬಾಕಿ ಪಾವತಿ**


ಕಿಯೋನಿಕ್ಸ್ ಅಸೋಸಿಯೇಷನ್ ಅವರು ಬಾಕಿ ಇರುವ ಬಿಲ್ಲುಗಳು ಪಾವತಿಯಾಗದಿರುವ ಬಗ್ಗೆ ರಾಜ್ಯಪಾಲರಿಗೆ ದೂರು ನೀಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಹಿಂದಿನ ಬಿಜೆಪಿ ಸರ್ಕಾರದವರು ದೊಡ್ಡ ಮೊತ್ತದ ಬಿಲ್ಲುಗಳನ್ನು ಪಾವತಿ ಮಾಡದೇ ಬಾಕಿ ಉಳಿಸಿದ್ದಾರೆ. ಈ ಬಿಲ್ಲುಗಳನ್ನು ಹಂತ ಹಂತವಾಗಿ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಭೂ ಸುರಕ್ಷಾ ಯೋಜನೆ ಭೂ ದಾಖಲೆಗಳ ಡಿಜಿಟಲೀಕರಣ ಕಾರ್ಯಕ್ರಮಕ್ಕೆ ಚಾಲನೆ

# ದಾಖಲೆಗಳು ಇನ್ಮುಂದೆ ಡಿಜಿಟಲ್‌ನಲ್ಲಿ ಲಭ್ಯ

### ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಹೇಳಿಕೆ | 70 ವರ್ಷದ ಹಳೆಯ ದಾಖಲೆಗಳಿಗೆ ಡಿಜಿಟಲ್ ಸ್ಪರ್ಶ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಸಾರ್ವಜನಿಕರ ಹಳೆಯ ಅಮೂಲ್ಯ ಭೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ ರಕ್ಷಿಸಿ ನಿಗದಿತ ಸಮಯದಲ್ಲಿಯೇ ನೀಡಲು ಸರ್ಕಾರ ಭೂ ಸುರಕ್ಷಾ ಯೋಜನೆ ರೂಪಿಸಿದೆ ಎಂದು ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಬುಧವಾರ ತಾಲೂಕು ಆಡಳಿತದ ವತಿಯಿಂದ ಭೂ ಸುರಕ್ಷ ಯೋಜನೆ ಹಾಗೂ ಭೂ ದಾಖಲೆಗಳ ಡಿಜಿಟಲೀಕರಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಕಂದಾಯ ಇಲಾಖೆಯ ಭೂಮಿ, ಸರ್ವೆ ಮತ್ತು ನೋಂದಣಿ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಗಣಕೀಕರಣ ಗೊಳಿಸಿ, ಶಿಥಿಲಾವಸ್ಥೆಯಲ್ಲಿರುವ ದಾಖಲೆಗಳನ್ನು ಶಾಶ್ವತವಾಗಿ ಉಳಿಸಿ, ನಕಲಿ ದಾಖಲೆಗಳನ್ನು ಸೃಷ್ಟಿಸಲು ಅವಕಾಶವಿರದಂತೆ ಗಣಕೀಕೃತ ದಾಖಲೆಗಳನ್ನು ನಾಗರಿಕರು, ಸ್ವತಃ ಆನ್‌ಲೈನ್‌ನಲ್ಲಿ ಪಡೆದುಕೊಳ್ಳಲು ಅನುವಾಗುವಂತೆ ಭೂ ಸುರಕ್ಷಾ ಯೋಜನೆಯನ್ನು ಸರ್ಕಾರ ಆರಂಭಿಸಿದೆ. ಇದರಿಂದ ಸುಮಾರು 70 ವರ್ಷಗಳ ಹಳೆಯ ದಾಖಲೆಗಳನ್ನು ಮತ್ತು ಕಡತಗಳನ್ನು ಸ್ಕ್ಯಾನ್ ಮಾಡಿ, ಕಡತಗಳನ್ನು ಸಂರಕ್ಷಣೆ ಮಾಡಿ, ಸಾರ್ವಜನಿಕರನ್ನು ವೃತಾ ಅಲೆದಾಡಿಸದೇ ತಕ್ಷಣವೇ ನೀಡ ಬಹುದಾದ ಕಾರ್ಯ ಇದಾಗಿದೆ. ಇದರಿಂದ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ತಹಸೀಲ್ದಾರ್ ಎಂ.ರೇಣುಕಾ ಮಾತನಾಡಿ, ಹಿಂದುಳಿದ ಈ ತಾಲೂಕಿನಲ್ಲಿ ಸಾರ್ವಜನಿಕರ ಹಳೆಯ ಆಸ್ತಿ, ಭೂ ದಾಖಲೆ, ಹಕ್ಕು ಬದಲಾವಣೆ ಕಡತಗಳು, ಡಿಆರ್ ಪಟ್ಟ ಕಡತಗಳು ಹಾಗೂ ಕೈ ಬರಹ ಪಹಣಿಗಳನ್ನು ಸ್ಕ್ಯಾನ್ ಮಾಡಿ ಸಂರಕ್ಷಿಸಿಲಾಗುವುದು. ಕಂದಾಯ ಇಲಾಖೆಯಲ್ಲಿನ ಎ ವರ್ಗದ 48, 356 ಕಡತಗಳ 19,34,240 ಪುಟಗಳು ಇದ್ದು, ಬಿ ವರ್ಗದ 27,102 ಕಡತಗಳ 5,42,040 ಪುಟಗಳು ನಮ್ಮ ಅಭಿಲೇಖಾಲಯದಲ್ಲಿ ಇವೆ. ಇವುಗಳನ್ನು ಡಿಜಟಲೀಕರಣ ಮಾಡಲು ಸರ್ಕಾರ ಸೂಚಿಸಿದ್ದು, ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅವರು ಆಸಕ್ತಿ ವಹಿಸಿ ಈಗಾಗಲೇ ಸುಮಾರು 45 ಸಾವಿರ ಕಡತಗಳನ್ನು ಡಿಜಟಲೀಕರಣ ಮಾಡಲಾಗಿದೆ. ಇನ್ನೂಳಿದ ಕಡತಗಳನ್ನು ಡಿಜಟಲೀಕರಣ ಮಾಡಲು ಸರ್ಕಾರ ಹೆಚ್ಚಿನ ಸಿಬ್ಬಂದಿಗಳು ಸೇರಿದಂತೆ ಸ್ಕ್ಯಾನಿಂಗ್ ಯಂತ್ರಗಳನ್ನು ನೀಡಿದ್ದು, ತ್ವರಿತಗತಿಯಲ್ಲಿ ಈ ಕಾರ್ಯವನ್ನು ಮಾಡಿ ಸಾರ್ವಜನಿಕರಿಗೆ ಅನೂಕಲ ಕಲ್ಪಿಸುತ್ತೇವೆ ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ಭೂ ದಾಖಲೆ ಪಡೆಯಲು ಜನರು ಕಚೇರಿಗೆ ಅಲೆಯುವಂತಿಲ್ಲ. ನೇರವಾಗಿ ಜನರಿಗೆ ಸಿಗುತ್ತದೆ. ಜನರನ್ನು ವಿನಾಃಕಾರಣ ಕಚೇರಿಗೆ ಅಲೆದಾಡಿಸುವುದನ್ನು ತಪ್ಪಿಸಲು ಸರ್ಕಾರ ಮಹತ್ವಾಕಾಂಕ್ಷಿ ಯೋಜನೆ ರೂಪಿಸಿದೆ ಇದರ ಸದುಪಯೋಗ ಜನರು ಪಡೆಯುವಂತೆ ತಿಳಿಸಿದರು. ಗ್ರೇಡ್ 2 ತಹಸೀಲ್ದಾರ್ ವಿ.ಕೆ.ನೇತ್ರಾವತಿ, ಶಿರಸ್ತೆದಾರ ಮಹಮ್ಮದ್ ಗೌಸ್, ತಾಲೂಕು ಸರ್ವೆ ಅಧಿಕಾರಿ ವಿಜಯಕುಮಾರ್, ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಸಯ್ಯದ್ ಶುಕೂರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಗುರುಸಿದ್ದನ ಗೌಡ, ಉದಯ ಜನ್ನು, ಮಾದಿಹಳ್ಳಿ ನಜೀರ್, ಷಫೀಉಲ್ಲಾ, ಪಪಂ ಸದಸ್ಯ ಸಿರಬಿ ಮಂಜುನಾಥ, ಥಾಣಿ ರಾಘವೇಂದ್ರ, ಬಾಸೂ ನಾಯ್ಕ್, ಕಾವಲಿ ವೆಂಕಟೇಶ, ಮರಳುಸಿದ್ದಪ್ಪ ಸೇರಿದಂತೆ ಅನೇಕರು ಇದ್ದರು.

# ಕನ್ನಡ ವಿವಿ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅವರಿಗೆ ಸಿದ್ಧರಾಮ ಸಾಹಿತ್ಯ ಪ್ರಶಸ್ತಿ ಪ್ರದಾನ



■ **ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅವರಿಗೆ 14ನೇ ಜ.14ರಂದು ಬೆಂಗಳೂರಿನ ಅರಮನೆ ಮೈದಾನದ ತ್ರಿಪುರವಾಸಿನಿ ಆವರಣದ ದಾನಶೂರ ಕಂಬಿ ಎಂ ಸಿದ್ಧರಾಮಣ್ಣ ಮಹಾಮಂಟಪದಲ್ಲಿ ಸಿದ್ಧರಾಮ ಸಾಹಿತ್ಯ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಲಿಂ.ವೇ. ಸಿದ್ಧರಾಮಯ್ಯ ಮತ್ತು ಗಂಗಮ್ಮ ಸ್ಮಾರಕ ದತ್ತಿ ಅರಸಿಕೆರೆ ಇವರಿಂದ ಪ್ರದಾನವಾಗುವ ಸಿದ್ಧರಾಮ ಪ್ರಶಸ್ತಿಯನ್ನು 852ನೇ ಶ್ರೀ ಗುರು ಸಿದ್ಧರಾಮೇಶ್ವರ ಮಹೋತ್ಸವ ಸಮಿತಿಯಿಂದ ಆಯ್ಕೆ ಮಾಡಲಾಗಿತ್ತು. ನೊಳಂಬ ಲಿಂಗಾಯತ ಸಮುದಾಯದ ಅಧ್ಯಕ್ಷರಾದ ಬಿ.ಕೆ. ಚಂದ್ರಶೇಖರ್, ಡಾ.ಸಿ.ಎಸ್.ಅಶ್ವಥ್ ನಾರಾಯಣರೆಡ್ಡಿ, ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಡಾಲಿ ಧನಂಜಯ ಹಾಗೂ ನೊಳಂಬ ಲಿಂಗಾಯತ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಜ.20 ರಂದು ಹಗರಿಬೊಮ್ಮನಹಳ್ಳಿಯಲ್ಲಿ ಜಿಲ್ಲಾ ಮಟ್ಟದ ದಿಶಾ ಸಮಿತಿ ಸಭೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯನ್ನು ಜ.20 ರಂದು ಹಗರಿಬೊಮ್ಮನಹಳ್ಳಿ ತಾಲೂಕು ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ ಮೋಹಮ್ಮದ್ ಅಲಿ ಅಕ್ರಮ್ ಷಾ ತಿಳಿಸಿದ್ದಾರೆ.

ಸಂಸದರಾದ ಇ.ತುಕಾರಾಂರವರ ಅಧ್ಯಕ್ಷತೆಯಲ್ಲಿ ಸಭೆ ಜರುಗಲಿದ್ದು, ದಿಶಾ ಸಭೆಯ ಪೂರ್ವದಲ್ಲಿ ಬೆ.10 ರಿಂದ 11 ಗಂಟೆಯವರೆಗೆ ಹಗರಿಬೊಮ್ಮನಹಳ್ಳಿ ಪಟ್ಟಣದ ಪುರಸಭೆ ಮುಂಭಾಗದಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕವಿ ಮನಸು

### ಉತ್ತರಾಯಣ

ದಿನಕರ ಪಥವ ಬದಲಿಸೋ ಸಮಯ
ಹೃದಯದಲಿ ಮೂಡಿದೆ ಹೊಸಹೊಸ ವಿಷಯ
ಉಸಿರಾಗಿರು ನೀನು ಪಡದಿರು ಎಂದೂ ಸಂಶಯ
ಜೊತೆಯಿರು ಎಂದೆಂದೂ ಕೈಹಿಡಿದು ಎಂಬುದೇ ಆಶಯ

ಮನದಲ್ಲಿ ನೀ ಬಂದು ನಿಂತಾಕ್ಷಣ
ಆರಂಭವೂ ಬಾಳಲ್ಲಿ ಉತ್ತರಾಯಣ
ನಿನ್ನೊಲವು ತುಂಬಿರೆ ತನುವ ಕ್ಷಣ ಕ್ಷಣ
ಅನುದಿನವು ನನಗೆ ಮಕರ ಸಂಕ್ರಮಣ

ಭೋರ್ಗರೆದು ಸುರಿದು ನಿಂತ ಮಳೆ
ಹಸಿರ ತೊಟ್ಟು ಕಂಗೊಳಿಸಿದೆ ಈ ಇಳೆ
ಹೃದಯಕ್ಕೆ ತಂಪೆರೆದು ತೆಗೆ ಪ್ರೀತಿಯ ಬೆಳೆ
ನೀ ಸನಿಹಕೆ ಬಂದರೆ ಬರುವುದು ಜೀವಕ್ಕೆ ಕಳೆ

**– ಚೇತನ ಭಾರ್ಗವ, ಬೆಂಗಳೂರು**

**ಮಕ್ಕಳ ಜ್ಞಾನಭಂಡಾರ ಹೆಚ್ಚಿಸಲು ಇರಲಿ ಮನೆಗೊಂದು ದಿನಪತ್ರಿಕೆ**

**ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನೆಗಳು**

ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ

ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
9902909399, 9980559681
9740742251, 8073589125

# ಜ.23ರಂದು ಕಂಪ್ಲಿ ಪುರಸಭೆ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆ

### ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ(ಮಹಿಳೆ)

■ **ಹಂಪಿ ಟೈಮ್ಸ್ ಕಂಪ್ಲಿ**

ಪಟ್ಟಣದ ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ 2025ನೇ ಜ.23ರಂದು ನಿಗಧಿಯಾಗಿದೆ. ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ (ಮಹಿಳೆ) ಮೀಸಲಿನಂತೆ 2024ರ ಆ.21ರಂದು ಚುನಾವಣೆ ನಿಗದಿಗೊಳಿಸಲಾಗಿತ್ತು. ರೋಟೇಷನ್ ಪ್ರಕಾರ ಅಧ್ಯಕ್ಷ ಸ್ಥಾನ ಪರಿಶಿಷ್ಟ ಪಂಗಡಕ್ಕೆ ಮೀಸಲು ದೊರಕಬೇಕು ಎಂದು ಪುರಸಭೆ ಸದಸ್ಯ ಎನ್. ರಾಮಾಂಜನೇಯಲು ನ್ಯಾಯಾಲಯದ ಮೆಟ್ಟಿಲೇರಿ ತಡೆ ತಂದಿದ್ದರಿಂದ ಚುನಾವಣೆ ಮುಂದೂಡಲ್ಪಟ್ಟಿತು. ನ್ಯಾಯಾಲಯವು ತಡೆಯನ್ನು ವಜಾಗೊಳಿಸಿದ ಹಿನ್ನಲೆಯಲ್ಲಿ ಅಧ್ಯಕ್ಷ ಉಪಾಧ್ಯಕ್ಷತ ಸ್ಥಾನಕ್ಕೆ ಮೀಸಲಿನಂತೆ ಚುನಾವಣೆ ನಡೆಯಲಿದೆ.

# ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ-7ರಲ್ಲಿ ಭಾಗವಹಿಸಿ ಆಯಾ ಶಾಲೆಗೆ ದಿ ಬೆಸ್ಟ್ ಚಿತ್ರ ಬಿಡಿಸಿದ ವಿದ್ಯಾರ್ಥಿಗಳು

**ಹೊಸಪೇಟೆ ತಾಲ್ಲೂಕು**

**1. ಎಂ. ಚೈತ್ರ**
ಬಿ ಆರ್ ಆರ್ ಜಿ ಪ್ರೌಢಶಾಲೆ
ಜಿ ನಾಗಲಾಪುರ
ಶಿಕ್ಷಕರು–ಚನ್ನಬಸಪ್ಪ ಕೆ.ಬಿ.

**2. ಕೆ. ಮಣಿಕಂಠ**
ಸರ್ಕಾರಿ ಪ್ರೌಢಶಾಲೆ ಅನಂತಶಯನ ಗುಡಿ
ಶಿಕ್ಷಕರು–ಗಂಗಮ್ಮ

**3. ಪ್ರಿಯಾಂಕ**
ಸರಕಾರಿ ಬಾಲಕಿಯರ ಪ್ರೌಢಶಾಲೆ
(ಮಾ.ಪು) ಹೊಸಪೇಟೆ
ಶಿಕ್ಷಕರು – ಜಿ.ರವೀಂದ್ರ

**4. ಉಷಾ**
ಸರ್ಕಾರಿ ಬಾಲಕಿಯರ ಪ್ರೌಢಶಾಲೆ,
ಕಮಲಾಪುರ
ಶಿಕ್ಷಕರು– ಅನಿಲ್ ಕುಮಾರ ಏ

**5. ಯಾಸ್ಮೀನ್**
ಮುನ್ಸಿಪಲ್ ಪ್ರೌಢಶಾಲೆ
ಚಿತ್ತವಾಡಗಿ, ಹೊಸಪೇಟೆ
ಶಿಕ್ಷಕರು– ಎ.ಎಂ. ವರಲಕ್ಷ್ಮಿ

**6. ಎನ್.ವಿ. ಅನಿತಾ**
ಸರ್ಕಾರಿ ಪ್ರೌಢಶಾಲೆ ಕಾರಿಗನೂರು
ಶಿಕ್ಷಕರು–ನಾಗವೇಣಿ ಡಿ.

**7.ಎಸ್.ಎನ್. ಸುಮಾ**
ಸರ್ಕಾರಿ ಸಂಯುಕ್ತ ಬಾಲಕಿಯರ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ
ಶಿಕ್ಷಕರು–ಶಿವಮ್ಮ

**8. ಸಹನ ಎಚ್.**
ಸರ್ಕಾರಿ ಪ್ರೌಢಶಾಲೆ ಡಣಾಪುರ
ಶಿಕ್ಷಕರು–ಸಂಧ್ಯಾ ಸೌಜನ್ಯ

**9. ಉಷಾ ಎಕ್ಸ್**
ಸರ್ಕಾರಿ ಪ್ರೌಢಶಾಲೆ ಮಲಪನ ಗುಡಿ
ಶಿಕ್ಷಕರು–ಅನಿತಾ ಎ.ವಿ.

**10. ಎನ್ ಶೇಕ್ಷಾವಲಿ**
ಸರ್ಕಾರಿ ಪದವಿಪೂರ್ವ ಕಾಲೇಜ್
(ಪ್ರೌಢಶಾಲಾ ವಿಭಾಗ), ಕಮಲಾಪುರ
ಶಿಕ್ಷಕರು–ಅಸ್ಮಾ ತರನ್ನುಂ/ನೆಮ್ಯ ನಾಯ್ಕ

**11. ಕೆ.ವಿಜಯ**
ಸರ್ಕಾರಿ ಪ್ರೌಢಶಾಲೆ, ಬುಕ್ಕ ಸಾಗರ
ಶಿಕ್ಷಕರು– ಬಿ. ಮೊಹಮ್ಮದ್ ಮನ್ಸೂರ್ ಅಲಿ

**12. ಭುವನೇಶ್ವರಿ**
ಕೆ.ಜಿ.ಬಿ.ವಿ. ಶಾಲೆ ಕಮಲಾಪುರ
ಶಿಕ್ಷಕರು–ಗಾಯಿತ್ರಿ ಟಿ

**13. ರುಫಿಯಾ**
ರಾಣಿ ಚೆನ್ನಮ್ಮ ಪ್ರೌಢಶಾಲೆ, ಹೊಸಪೇಟೆ
ಶಿಕ್ಷಕರು– ಸಿಂಧುಜಾ

14. ಓ ಕೀರ್ತಿ
ಪ್ರಿಯದರ್ಶಿನಿ ಬಾಲಕಿಯರ ಪ್ರೌಢಶಾಲೆ
ಮರಿಯಮ್ಮನಹಳ್ಳಿ
ಶಿಕ್ಷಕರು–ಜಾಕೀರ್ ಹುಸೇನ್

**15. ಪ್ರಶಾಂತ ಕುಮಾರ**
ಸರ್ಕಾರಿ ಪ್ರೌಢಶಾಲೆ, ಗುಂಡ
ಶಿಕ್ಷಕರು–ನಾರಾಯಣ ಕೆ

**16. ಸಂಜನಾ**
ಸರ್ಕಾರಿ ಪ್ರೌಢಶಾಲೆ,
ಎನ್ ಸಿ ಕಾಲೋನಿ, ಹೊಸಪೇಟೆ
ಶಿಕ್ಷಕರು– ಶಾನು ಟಿ

**17. ಜಿ. ಲಿಂಗರಾಜ**
ಸರ್ಕಾರಿ ಪ್ರೌಢಶಾಲೆ, ಹಂಪಿನಕಟ್ಟೆ
ಶಿಕ್ಷಕರು– ಪ್ರಶಾಂತ್




**ಹಗರಿಬೊಮ್ಮನಹಳ್ಳಿ ತಾಲೂಕು**

**1. ಕೆ. ಶ್ರೀದೇವಿ**
ಸರ್ಕಾರಿ ಪ್ರೌಢಶಾಲೆ, ಉಪನಾಯಕನಹಳ್ಳಿ
ಶಿಕ್ಷಕರು–ಕವಿತಾ

**2. ಎಂ. ಪೂಜ**
ಎಸ್.ಜಿ.ಬಿ. ಪ್ರೌಢಶಾಲೆ, ಬೆಣಕಲ್ಲು
ಶಿಕ್ಷಕರು–ಶಿವತನಯ ಎಸ್.ಸಿ.

**3. ಅಕ್ಷತಾ ಕೆ.ವಿ.**
ಕೌದಿ ಮಹಂತೇಶ್ವರ ಪ್ರೌಢಶಾಲೆ,
ಬಾಚಿಗೊಂಡನಹಳ್ಳಿ
ಶಿಕ್ಷಕರು– ಪ್ರಕಾಶಪ್ಪ ವಿ.

**4. ಪಿ ಸಹನಾ**
ಕೆ. ಪಿ. ಸರ್ಕಾರಿ ಪ್ರೌಢಶಾಲೆ, ಹಳೆ ಹಗರಿಬೊಮ್ಮನಹಳ್ಳಿ
ಶಿಕ್ಷಕರು–ಮುದ್ದಮ್ಮ

**5. ಎಚ್. ಮಾನಸ**
ಕೆ.ಪಿ.ಜಿ. ಪ್ರೌಢಶಾಲೆ, ತಂಬ್ರಹಳ್ಳಿ
ಶಿಕ್ಷಕರು – ಜೆ ರಾಜೇಶ್ವರಿ

**6. ಬಿ. ಕಾವ್ಯ**
ಕೆ.ಪಿ.ಜಿ. ಪ್ರೌಢಶಾಲೆ, ದಶಮಾಪುರ
ಶಿಕ್ಷಕರು–ಅನಿತಾ

**7. ಕೆ. ನಂದಿತಾ**
ಸರ್ಕಾರಿ ಪ್ರೌಢಶಾಲೆ, ವರದಾಪುರ
ಶಿಕ್ಷಕರು–ಮಂಜುಳಾ

**8. ಕೆ.ಸಂಜನ**
ಸರ್ಕಾರಿ ಪ್ರೌಢಶಾಲೆ, ವಲ್ಲಭಾಪುರ
ಶಿಕ್ಷಕರು– ಶಾಹಿದ್ ಬಾಷ .ಎನ್

**9. ಕೆ. ಸಂಗೀತ**
ಶ್ರೀ ಚಂದ್ರಮೌಳೇಶ್ವರ ಪ್ರೌಢಶಾಲೆ,
ಹಂಪಾಪಟ್ಟಣ
ಶಿಕ್ಷಕರ ಹೆಸರು–ರಾಘವೇಂದ್ರ ಪಿ

**10. ಸುಧಾ ಬಿ**
ಸರ್ಕಾರಿ ಪ್ರೌಢಶಾಲೆ, ಗದ್ದಿಕೇರಿ
ಶಿಕ್ಷಕರು–ರವಿಚಂದ್ರ ನಾಯ್ಕ ಎಲ್

**11. ಪಿ. ಚಂದನ**
ರಾಷ್ಟ್ರೋತ್ಥಾನ ಪ್ರೌಢಶಾಲೆ, ಹ.ಬೊ. ಹಳ್ಳಿ
ಶಿಕ್ಷಕರು–ಎಲ್. ವೆಂಕಟೇಶ್

**12. ಪಿ. ಸಹನ**
ಎಲ್.ಎಚ್.ಎಸ್ ಪ್ರೌಢಶಾಲೆ,
ಹಂಪಸಾಗರ
ಶಿಕ್ಷಕರು–ವಿಜಯಕುಮಾರ ಬೇಂದ್ರೆ

**13. ಕೆ. ಕಾರ್ತಿಕ ಗೌಡ**
ಸರ್ಕಾರಿ ಪ್ರೌಢಶಾಲೆ, ಸೊನ್ನ
ಶಿಕ್ಷಕರು– ಫಕೀರಗೌಡ ಪಾಟೀಲ್

**ಹಡಗಲಿ ತಾಲೂಕು**

**1. ಅಕ್ಷತಾ**
ಶ್ರೀ ಶರಣಬಸವೇಶ್ವರ ಸರ್ಕಾರಿ
ಪ್ರೌಢಶಾಲೆ, ಮೀರಾ ಕೊರನಹಳ್ಳಿ
ಶಿಕ್ಷಕರು–ಗುರುಪ್ರಸಾದ್ ಕೆ.ಎಂ.

**ಕೊಟ್ಟೂರು ತಾಲೂಕು**

**1. ವೇದಶ್ರೀ**
ಎಂ.ಡಿ.ಆರ್.ಎಸ್. ಅಂಬಳಿ
ಶಿಕ್ಷಕರು–ಕೊಟ್ರೇಶ ನಾಯ್ಕ

**ಹರಪನಹಳ್ಳಿ ತಾಲೂಕು**

**1. ಕೆ. ಉಷಾ**
ಸರ್ಕಾರಿ ಪ್ರೌಢಶಾಲೆ, ಹಗರಿ ಗಜಾಪುರ
ಶಿಕ್ಷಕರು–ಲಲಿತಾ ಮಾಮನಿ

**2. ಪ್ರಜ್ವಲ್ ಡಿ.ಜಿ.**
ಸರ್ಕಾರಿ ಪ್ರೌಢಶಾಲೆ, ಕಡಬಗೆರೆ
ಶಿಕ್ಷಕರು– ಸೋಮಪ್ಪ ಬಿ ನೀಲೊಗೊಳ

**ಗದಗ ಜಿಲ್ಲೆ**

**1. ಅಶ್ವಿನಿ ಜವಳಿ**
ಶ್ರೀ ಫಲಹಾರೇಶ್ವರ ಪ್ರೌಢಶಾಲೆ, ಹಸೂಟಿ
ರೋಣ ತಾ. ಗದಗ ಜಿ.
ಶಿಕ್ಷಕರು–ಎಂ.ವಿ. ಪ್ರಕಾಶಾರಾಧ್ಯ

**ಶಿವಮೊಗ್ಗ ಜಿಲ್ಲೆ**

**1. ಚೈತ್ರ ಎಂ**
ಶ್ರೀ ಮಲ್ಲಿಕಾರ್ಜುನಸ್ವಾಮಿ ಪ್ರೌಢಶಾಲೆ,
ಆಗರದ ಹಳ್ಳಿ
ಭದ್ರಾವತಿ ತಾ. ಶಿವಮೊಗ್ಗ ಜಿ.
ಶಿಕ್ಷಕರು– ಎಂ.ಜಿ ಮಂಜುನಾಥ

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆಗೆ ನಾವು ಸಿದ್ಧ 64 ದಿನ

HAMPI TIMES MARGADARSHI

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲಿಷ್

## Off to outer space Tomorrow Morning

**Most important Extracts (3 marks)**

**1 "You can cross out my name from the telephone book"**

A. Who is the speaker?
**Ans:** The astronaut is the speaker.
B. Where is he going to?
**Ans:** He is going into the space next morning.
C. Why does he want to cross out his name?
**Ans:** There will be no communication by phone. So he wants others to cross out his name

**2. "There won't be any calendar, there won't be any clock; day light will be on the switch and winter under lock."**

A. Why are the calendars, useless in the outer space?
**Ans:** Because the space craft rotates around the earth. In each rotation there will be a day and night. So the poet says "calendars and clocks" are useless in space.
B. 'winter under lock' what does it mean?
**Ans:** The expression "winter under lock," means, in space, there is no change of weather.
C. Who is the speaker?
**Ans:** The astronaut is the speaker.

**3. "I'll doze when I'm sleepy and wake without a knock"**

A. Who will doze?
**Ans:** The astronaut will doze.
B. Where is he sleeping?
**Ans:** He is sleeping in the space craft.
C. Why does he do so?
**Ans:** Because in space there will be no days and nights as on the earth.

**5. "Then you and every soul on earth can go and blow your top"**

A. Who is the speaker?
**Ans:** The astronaut is the speaker
B. Where is the speaker going to?
**Ans:** The speaker is going to space.
C. Why does he say every soul blow their top?
**Ans:** Because it takes twenty hundred light years for the rockets for travelling across the galaxy. By that time everyone would explode in anger.

## S.R-4 THE BIRD OF HAPPINESS

Most important 2 marks question and answers

**1. What did the old folk say about happiness?**
**Ans:** The old folk used to say that happiness was a beautiful bird living on a snowy mountain far away in the east. Wherever the bird flew, happiness went with it. Every year people went to look for the bird, but no one returned. The bird of happiness was guarded by three old monsters, who killed the men by blowing through their long beards.

**2. What did the third monster warn Wangjia?**
**Ans:** The third monster warned Wangjia to bring him Bhima's eyes or he would gouge out his eye balls. He had to walk another 900 miles without eyes.

**3. How was the last journey of Wangjia different from the previous one?**
**Ans:** Wangjia's last journey was very difficult as he was blind and had to grop his way with his hands on the ground. He crawled another 900 miles. But finally he climbed the snowy mountain and heard the voice of the Bird of Happiness.

**4. What hardships did Wangjia undergo on his way to find the Bird?**
**Ans:** Wangjia walked nine hundred miles across the scare. His feet and hands were torn into pieces. He walked without food for another nine hundred miles. He was nothing but skin and bone. He crawled without eye sight for another nine hundred miles. It was his toughest journey.

**5. What changes came over Wangjia as the bird of happiness caressed him?**
**Ans:** The Bird of Happiness caressed Wangjia gently with his wings and sang for him. His eye balls flew back to their sockets, and now he saw much more brightly than before. All his wounds were healed and he was stronger than ever. The Bird of Happiness offered him some dried meat and cream cake, and bore him back to his village.

Prepared by : RB Gurubasavaraj Teacher. GHS Basarakodu. H.B.Halli Taluk. Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

- Admissions
- Requirements
- Firm Branding
- Public Notice
- Change of Name

BOOK NOW!

Book Your Advertisements in Leading Local HAMPI TIMES Print & Digital News Paper
9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

# ಭಿಕ್ಷಾಟನೆ ಮುಕ್ತ ಗವಿಸಿದ್ಧೇಶ್ವರ ಜಾತ್ರೆಗಾಗಿ ಅನಿರೀಕ್ಷಿತ ದಾಳಿ



■ **ಹಂಪಿ ಟೈಮ್ಸ್ ಕೊಪ್ಪಳ**

ಶ್ರೀ ಗವಿಸಿದ್ದೇಶ್ವರ ಜಾತ್ರಾ ನಿಮಿತ್ಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸ್ಪಂದನಾ, ಮಹಿಳಾ ಧ್ವನಿ ಶಿಕ್ಷಣ ಗ್ರಾಮೀಣ ಕ್ಷೇಮಾಭಿವೃದ್ಧಿ ಸಂಸ್ಥೆ, ಕೊಪ್ಪಳ ಹಾಗೂ ಭಿಕ್ಷುಕರ ಪುನರವಸತಿ ಕೇಂದ್ರ, ಬಳ್ಳಾರಿರವರ ಸಂಯುಕ್ತಾಶ್ರಯದಲ್ಲಿ "ಭಿಕ್ಷಾಟನೆ ಮುಕ್ತ ಶ್ರೀಗವಿಸಿದ್ದೇಶ್ವರ ಜಾತ್ರೆ"ಯನ್ನಾಗಿಸಲು ಭಿಕ್ಷುಕರ ಪತ್ತೆ ಮತ್ತು ಪುನರವಸತಿಗಾಗಿ ಬುಧವಾರದಂದು ಅನಿರೀಕ್ಷಿತ ದಾಳಿಯನ್ನು ಆಯೋಜಿಸಲಾಯಿತು.

ಈ ಚಟುವಟಿಕೆಗೆ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳಪ್ರಾಧಿಕಾರದಸದಸ್ಯಕಾರ್ಯದರ್ಶಿಗಲಾದ ಮಹಾಂತೇಶ ದರಗದ ಅವರು ವಾಹನಕ್ಕೆ ಹಸಿರು ನಿಶಾನೆಯನ್ನು ಪ್ರದರ್ಶಿಸುವ ಮೂಲಕ ಚಾಲನೆ ನೀಡಿದರು.

ನಂತರ ನಡೆಸಿದ ಅನಿರೀಕ್ಷಿತ ದಾಳಿಯಲ್ಲಿ 12 ಜನ ಭಿಕ್ಷುಕರನ್ನು ಪತ್ತೆ ಹಚ್ಚಿ ವಶಕ್ಕೆ ಪಡೆಯಲಾಯಿತು. ಈ ದಾಳಿಯಲ್ಲಿ ಕೊಪ್ಪಳ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಅಜ್ಜಪ್ಪ ಸೊಗಲದ, ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ, ಮಹಿಳಾ ಧ್ವನಿ ಶಿಕ್ಷಣ ಗ್ರಾಮೀಣ ಕ್ಷೇಮಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷೆ ಪ್ರೀಯದರ್ಶಿನಿ ಮುಂಡರಗಿ ಮಠ, ಸ್ಪಂದನಾ ಸಂಸ್ಥೆಯ ಸಂಯೋಜಕ ಶಂಕರ ಸುರಳ, ಬಳ್ಳಾರಿಯ ಭಿಕ್ಷಕುರ ಪುನರವಸತಿ ಕೇಂದ್ರದ ಅಧೀಕ್ಷಕ ಕೆ.ಪಿ. ಚಿನಪಾಲಯ್ಯ, ವಾರ್ಡರ ಜೆ.ಮಣಿಕಂಠ ಸೇರಿದಂತೆ ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ–1098 ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಿಬ್ಬಂಧಿಗಳು ಭಾಗವಹಿಸಿದ್ದರು.

ಬುಧವಾರ ಮಧ್ಯಾಹ್ನದವರೆಗೆ ಕಾರ್ಯಾಚರಣೆಯಲ್ಲಿ 12 ಜನರನ್ನು ಪತ್ತೆ ಹಚ್ಚಿ ವಶಕ್ಕೆ ಪಡೆದು, ಅವರಿಗೆ ಪುನರವಸತಿಯನ್ನು ಕಲ್ಪಿಸಲಾಗುತ್ತದೆ. ಭಿಕ್ಷಾಟನೆ ಮಾಡುವುದು ಹಾಗೂ ಭಿಕ್ಷಾಟನೆಯಲ್ಲಿ ಮಕ್ಕಳನ್ನು ಬಳಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ. ಆದ್ದರಿಂದ ಯಾವುದೇ ವ್ಯಕ್ತಿ/ಮಗುವಿಗೆ ಭಿಕ್ಷೆಯ ರೂಪದಲ್ಲಿ ಹಣ ಅಥವಾ ವಸ್ತಗಳನ್ನು ನೀಡದಂತೆ ಹಾಗೂ ಭಿಕ್ಷಾಟನೆ ನಿರ್ಮೂಲನೆಯಲ್ಲಿಕೊಪ್ಪಳಜಿಲ್ಲಾಡಳಿತದೊಂದಿಗ ಕೈ ಜೋಡಿಸುವಂತೆ ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ತಿಳಿಸಿದೆ.

# ಜ.26 ಗಣರಾಜ್ಯೋತ್ಸವ ಆಚರಣೆ

## ಅಚ್ಚುಕಟ್ಟು ಆಯೋಜನೆಗೆ ಆದ್ಯತೆ | ಎಡಿಸಿ ಇ ಬಾಲಕೃಷ್ಣ ಹೇಳಿಕೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಗಣರಾಜ್ಯೋತ್ಸವ ಆಚರಣೆಯನ್ನು ಜ.26 ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ಅಚ್ಚುಕಟ್ಟಾಗಿ ಆಚರಣೆ ಮಾಡಲು ಸೂಕ್ತ ಆಯೋಜನೆಗೆ ಜಿಲ್ಲಾಡಳಿತದಿಂದ ಆದ್ಯತೆ ನೀಡಬೇಕು ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಗಣರಾಜ್ಯೋತ್ಸವ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ವಿವಿಧ ಸಮಿತಿಗಳ ಸಮನ್ವಯತೆಯೊಂದಿಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮದ ವೇದಿಕೆ, ಧ್ವಜಾರೋಹಣ, ರಾಷ್ಟ್ರಗೀತೆ ಗಾಯನ, ವಿವಿಧ



ತಂಡಗಳಿಂದ ಆಕರ್ಷಕ ಪಥ ಸಂಚಲನ ಮತ್ತು ಕವಾಯತು ಸೇರಿದಂತೆ ಪರೇಡ್ ವೀಕ್ಷಣೆಗೆ ಅಚ್ಚುಕಟ್ಟಾಗಿ ಆಯೋಜಿಸಲು ಸೂಕ್ತ ಕ್ರಮ ವಹಿಸಿಕೊಳ್ಳುವಂತೆ ಸೂಚಿಸಿದರು.

ಜ.25 ರಂದು ಹೊಸಪೇಟೆ ತಹಸೀಲ್ದಾರರು, ಪೌರಾಯುಕ್ತರು, ನಗರಸಭೆ ಅಧಿಕಾರಿಗಳು ಪರಿಶೀಲಿಸುವಂತೆ ಹಾಗೂ ಜಿಲ್ಲಾ ಕ್ರೀಡಾಂಗಣದಲ್ಲಿ ನೆರವೇರಿಸುವ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಜರಾಗುವಂತೆ ತಿಳಿಸಿದರು.

ಈ ವೇಳೆ ಹೊಸಪೇಟೆ ವಿಭಾಗದ ಸಹಾಯಕ ಆಯುಕ್ತ ವಿವೇಕಾನಂದ, ಹೆಚ್ಚುವರಿ ಜಿಲ್ಲಾ ವರಿಷ್ಠಾಧಿಕಾರಿ ಸಲೀಂ ಪಾಷಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರ್, ತಹಸೀಲ್ದಾರ ಎಂ.ಶೃತಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ಸಾರ್ವಜನಿಕರ ಅನುಕೂಲಕ್ಕೆ ಉಕ್ಕಡ ಪೊಲೀಸ್ ಠಾಣೆ ಜಾತ್ರೆಯಲ್ಲಿ ಸೈಬರ್ ಕ್ರೈಂ ಜಾಗೃತಿ




■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರೆಯ ಅಂಗವಾಗಿ ಸಾರ್ವಜನಿಕರ ಅನುಕೂಲಕ್ಕಾಗಿ ಕೊಪ್ಪಳ ಜಿಲ್ಲಾ ಪೊಲೀಸ್ ಇಲಾಖೆಯಿಂದ ಜಾತ್ರೆಯಲ್ಲಿ ಉಕ್ಕಡ ಪೊಲೀಸ್ ಠಾಣೆಯನ್ನು (ಔಟ್ ಪೋಸ್ಟ್) ಬುಧವಾರ ತೆರೆಯಲಾಯಿತು.

ಜಾತ್ರೆಯಲ್ಲಿ ತೆರೆಯಲಾದ ಉಕ್ಕಡ ಪೊಲೀಸ್ ಠಾಣೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ ಉದ್ಘಾಟಿಸಿದರು.

**ಸೈಬರ್ ಕ್ರೈಂ ಬಗ್ಗೆ ಜಾಗೃತಿ:** ಇತ್ತೀಚೆಗೆ ಸೈಬರ್ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಕೊಪ್ಪಳ ಜಿಲ್ಲಾ ಪೊಲೀಸ್ ಹಾಗೂ ಸೈಬರ್, ಕೊಪ್ಪಳದ ಆರ್ಥಿಕ ಮತ್ತು ಮಾದಕ ದ್ರವ್ಯ ಅಪರಾಧ ಪೊಲೀಸ್ ಠಾಣೆಯು ಮುಂದಾಗಿದ್ದು, ಜಾತ್ರೆಯ ಉಕ್ಕಡ ಪೊಲೀಸ್ ಠಾಣೆಯ ಮುಂಭಾಗದಲ್ಲಿ 'ನನಗೆ ಸೈಬರ್ ಕ್ರೈಂ ಜಾಗೃತಿ ಇದೆ ನಾನು ಸೈಬರ್ ಮೋಸಕ್ಕೆ ಒಳಗಾಗುವುದಿಲ್ಲ' ಮತ್ತು ನೀವು ಸೈಬರ್ ಅಪರಾಧಕ್ಕೆ ಒಳಗಾಗಿದ್ದರೆ, ತಕ್ಷಣ 24/7 ಸಹಾಯವಾಣಿ ಸಂಖ್ಯೆ 1930 ಗೆ ಕರೆ ಮಾಡಿ' ಎಂಬ ಸಂದೇಶವಿರುವ ಸೆಲ್ಫಿ ಪಾಯಿಂಟ್ ನಿರ್ಮಿಸಿ ಅರಿವು ಮೂಡಿಸಲಾಗುತ್ತಿದೆ.ಈ ಸಂದರ್ಭದಲ್ಲಿ ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹೇಮಂತ ಕುಮಾರ, ಕೊಪ್ಪಳ ಡಿವೈಎಸ್ಪಿ ಮುತ್ತಣ್ಣ ಸವರಗೋಳ ಸೇರಿದಂತೆ ಇತರೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

## ಸ್ವಯಂ ಉದ್ಯೋಗ ತರಬೇತಿಗೆ ಅರ್ಜಿ ಆಹ್ವಾನ


**ಹಂಪಿ ಟೈಮ್ಸ್ ಕೊಪ್ಪಳ :**

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಿಂದ ಕೊಪ್ಪಳ ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತರಿಗೆ ಸ್ವಯಂ ಉದ್ಯೋಗ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. 10 ದಿನಗಳ ಹೈನುಗಾರಿಕೆ ಮತ್ತು ಎರಹುಳು ಗೊಬ್ಬರ ತಯಾರಿಕೆ ತರಬೇತಿಗಾಗಿ ಜನವರಿ 17 ರಂದು ಸಂದರ್ಶನ ನಡೆಯಲಿದ್ದು, ಜ. 20 ರಿಂದ ತರಬೇತಿ ಪ್ರಾರಂಭವಾಗಲಿವೆ. 30 ದಿನಗಳ ಮಹಿಳಾ ಹೊಲಿಗೆ ತರಬೇತಿಗಾಗಿ ಜ. 24 ರಂದು ಸಂದರ್ಶನ ನಡೆಯಲಿದ್ದು, ಜ. 27 ರಿಂದ ತರಬೇತಿ ಪ್ರಾರಂಭವಾಗಲಿವೆ.

ಅರ್ಜಿ ಸಲ್ಲಿಸಲು ಅರ್ಜಿದಾರರು 18 ರಿಂದ 45 ವರ್ಷ ಒಳಗಿನವರಾಗಿರಬೇಕು. ಕನಿಷ್ಠ ಎಂಟನೇ ತರಗತಿ ಪಾಸ್ ಆಗಿರಬೇಕು. ಮೊ.ಸಂ: 9481085217, 7259073827, 9538096796 ಗೆ ಸಂಪರ್ಕಿಸಬಹುದಾಗಿದೆ.

---

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ.
ಡಿ..ವಿ.ಜಿ.



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 15–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1622.73 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 11314 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 69.322 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1588.94 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.166 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

16–01–2025 – ಗುರುವಾರ

| | |
|---|---|
| ತಿಥಿ | : ತೃತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಆಶ್ಲೇಷ |
| ಯೋಗ | : ಆಯುಷ್ಮಾನ್ |
| ಕರಣ | : ವಾಣಿಜ |
| ಸೂರ್ಯೋದಯ | : 07:11:38 |
| ಸೂರ್ಯಾಸ್ತ | : 18:02:04 |
| ರಾಹು ಕಾಲ | : 13:58–15:19 |
| ಯಮಘಂಡ ಕಾಲ | : 07:12–08:33 |
| ಗುಳಿಕ ಕಾಲ | : 09:54–11:16 |

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

## ಜ.19 ಮಹಾಯೋಗಿ ವೇಮನ ಜಯಂತಿ


**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮವನ್ನು ಜ.19 ರಂದು ಬೆಳಿಗ್ಗೆ 11.30 ಗಂಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಉದ್ಘಾಟಿಸುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ವಿಧಾನಪರಿಷತ್ ಶಾಸಕರು ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಜಿಲ್ಲಾ ರೆಡ್ಡಿ ಜನಸಂಘ ಜಿಲ್ಲಾಧ್ಯಕ್ಷ ಎನ್.ಪ್ರತಾಪ್ ರೆಡ್ಡಿ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಶ್ರೀ ಸತ್ಯಂ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಅಲ್ಲಂಭಾಷ ಜಯಂತಿ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ.

---

## ಆನಂದ ಬಾಣ




## ರಾಜ್ಯಪಾಲರ ಬಳ್ಳಾರಿ ಜಿಲ್ಲಾ ಪ್ರವಾಸ

■ **ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯದ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಜನವರಿ 17 ರಂದು ಬಳ್ಳಾರಿ ಜಿಲ್ಲೆಯಲ್ಲಿ ಒಂದು ದಿನದ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.



ಜ.17 ರಂದು ಮಧ್ಯಾಹ್ನ ಬೆಂಗಳೂರಿನ ಹೆಚ್‌ಎಎಲ್‌ನ ಏರ್‌ಪೋರ್ಟ್ ನಿಂದ ವಿಶೇಷ ವಿಮಾನ ಮೂಲಕ ಹೊರಟು, ಮಧ್ಯಾಹ್ನ 03.10 ಗಂಟೆಗೆ ಬಳ್ಳಾರಿಯ ಜಿಂದಾಲ್ ಏರ್‌ಪೋರ್ಟ್‌ಗೆ ಆಗಮಿಸುವರು. ಅಲ್ಲಿಂದ 03.15 ಕ್ಕೆ ಹೊರಟು ಸಂಜೆ 04 ಗಂಟೆಗೆ ಕುರುಗೋಡು ತಾಲ್ಲೂಕಿನ ದಮ್ಮೂರು ಗ್ರಾಮದ ಬಳಿಯ ಎಸ್‌ಬಿ ಸಂಸ್ಥೆಯ ಬೃಂದಾ ನ್ಯಾಷನಲ್ ಪಬ್ಲಿಕ್ ಶಾಲೆ, ಬೃಂದಾ ಪಿಯು ಕಾಲೇಜ್, ಬೃಂದಾ ಡಿಗ್ರಿ ಕಾಲೇಜ್ ಮತ್ತು ಸ್ಕಂದ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಕಾಲೇಜ್‌ಗಳ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬಳಿಕ ಸಂಜೆ 05 ಗಂಟೆಗೆ ಹೊರಟು, ಜಿಂದಾಲ್ ಏರ್‌ಪೋರ್ಟ್ ನಿಂದ ವಿಶೇಷ ವಿಮಾನ ದ ಮೂಲಕ ಇಂದೋರ್‌ಗೆ ಪ್ರಯಾಣಿಸುವರು ಎಂದು ಪ್ರಕಟಣೆ ತಿಳಿಸಿದೆ.

## ಮಕ್ಕಳಿಗಾಗಿ ಆಸ್ತಿ ಮಾಡಬೇಡಿ ಮಕ್ಕಳನ್ನೇ ಆಸ್ತಿಯಾಗಿ ಮಾಡಿ ಗ್ರಾಪಂ ಅಧ್ಯಕ್ಷ ಕೆ.ಕೃಷ್ಣ ಅಭಿಮತ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಮಕ್ಕಳು ಸಮಾಜದ ಆಸ್ತಿಯಾಗಬೇಕಾದರೆ ಅದಕ್ಕೆ ಪೂರಕ ವಾತಾವರಣ ಅಗತ್ಯ ಎಂದು ಗ್ರಾಪಂ ಅಧ್ಯಕ್ಷ ಕೆ.ಕೃಷ್ಣ ಹೇಳಿದರು.

ತಾಲೂಕಿನ ಗುಡೇಕೋಟೆ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಗ್ರಾಪಂ ವತಿಯಿಂದ ಬುಧವಾರ ಏರ್ಪಡಿಸಿದ್ದ ಮಕ್ಕಳ ಗ್ರಾಮ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂದು ಹಿರಿಯರು ಹೇಳುತ್ತಿದ್ದರು. ಆದರೆ ಈ ಧ್ಯೇಯವಾಕ್ಯ ಈಗ ಇಂದಿನ ಮಕ್ಕಳೇ ಇಂದಿನ ಪ್ರಜೆಗಳು ಎಂದು ಬದಲಾಗಿದೆ. ಮಕ್ಕಳಿಗಾಗಿ ಆಸ್ತಿ ಮಾಡಬೇಡಿ, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ ಎಂಬುದು ಇತ್ತೀಚಿನ ಪರಿಕಲ್ಪನೆ. ಸಮಾಜದ ಎಲ್ಲ ಸ್ತರಗಳಲ್ಲಿ ಮಕ್ಕಳ ಶೋಷಣೆ ಆಗುತ್ತಿರುವುದನ್ನು ಗಮನಿಸುತ್ತೇವೆ. ದಿನಬೆಳಗಾದರೆ ಮಾಧ್ಯಮಗಳಲ್ಲಿ ಮಕ್ಕಳ ಮೇಲಾಗುವ ಅತ್ಯಾಚಾರ, ದೌರ್ಜನ್ಯ, ಅಪಹರಣ, ಅನಾಥ ಮಗುವಿನ ಪತ್ತೆ, ಕಸದ ತೊಟ್ಟಿಯಲ್ಲಿ ಸಿಕ್ಕ ಹಸುಗೂಸು, ಹೀಗೆ ಮಕ್ಕಳನ್ನು ಕೇಂದ್ರೀಕೃತಗೊಂಡ ಅನೇಕ ಸುದ್ದಿಗಳನ್ನು ಕಾಣಬಹುದು. ಸಮಾಜದ ಆಸ್ತಿಯಾಗಬೇಕಾದ ಮಗು ನಿರಂತರವಾಗಿ ಶೋಷಣೆಗೆ ಒಳಗಾಗುತ್ತಿರುವಾಗ ಇಂತಹ ಮಕ್ಕಳ ರಕ್ಷಣೆ ಮಾಡುವವರು ಯಾರು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆಲ್ಲಾ ಉತ್ತರವೆಂದರೆ ಯಾರಿಗೆ ತೊಂದರೆಯಾಗಿದೆಯೋ ಅವರೇ ಅದರ ವಿರುದ್ದ ಧ್ವನಿ ಎತ್ತಬೇಕು ಎಂದು ತಿಳಿಸಿದರು.

ಗುಡೇಕೋಟೆ ಪೊಲಿಸ್ ಠಾಣೆ ಪಿಎಸ್‌ಐ ಜಿ. ಸುಬ್ರಹ್ಮಣ್ಯಂ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸಲು ಹಾಗೂ ಆ ಹಕ್ಕುಗಳಿಗೆ ಚ್ಯುತಿ ಬಂದಾಗ ರಕ್ಷಣೆ ಮಾಡಿಕೊಳ್ಳಲು ಹಾಗೂ ತಮ್ಮ ಬೇಕು, ಬೇಡಗಳನ್ನು ಸಮಾಜದ ಮುಂದೆ ನಿರ್ಭಯವಾಗಿ ಹೇಳಿಕೊಳ್ಳಲು ಇರುವ ಒಂದೇ ಒಂದು ವೇದಿಕೆ ಎಂದರೆ ಮಕ್ಕಳ ವಿಶೇಷ ಗ್ರಾಮಸಭೆ. ನಾಗರಿಕರು ತಮ್ಮ ಬೇಡಿಕೆಗಳನ್ನು ಅಹವಾಲುಗಳನ್ನು ಗ್ರಾಮಸಭೆಯ ಮೂಲಕ ಸಲ್ಲಿಸುವಂತೆ ಮಕ್ಕಳೂ ಸಹ ತಮ್ಮ ಬೇಡಿಕೆಗಳನ್ನು ಕುಂದುಕೊರತೆಗಳನ್ನು ಮಕ್ಕಳ ಗ್ರಾಮಸಭೆಯ ಮೂಲಕ ಪರಿಹರಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶ ನೀಡಲಾಗಿದೆ ಎಂದು ತಿಳಿಸಿದರು. ಇಂಥಹ ದೂರುಗಳು ಬಂದಲ್ಲಿ ಇಲಾಖೆಯು ಅವರಿಗೆ ಎಲ್ಲಾ ರೀತಿಯ ಸಹಕಾರ ನೀಡಿ ಕಾನೂನು ರಕ್ಷಣೆ ಜತೆ ತಪ್ಪಿತಸ್ಥರಿಗೆ ಸೂಕ್ತ ಕಾನೂನು ಕ್ರಮ ಜರುಗಿಸುತ್ತದೆ ಎಂದು ತಿಳಿಸಿದರು.

ಪಿಡಿಒ ಬಸಮ್ಮ, ಕರ್ನಾಟಕ ಪಬ್ಲಿಕ್ ಶಾಲೆ ಪ್ರೌಢಶಾಲಾ ವಿಭಾಗದ ಪ್ರಾಚಾರ್ಯ ಗಿರೀಶ್, ಉಪ ಪ್ರಾಚಾರ್ಯೆ ರುಕ್ಮಿಣಿ ಬಾಯಿ, ಆಶಾ ಕಾರ್ಯಕರ್ತೆ ಶೈಲಜಾ, ಆರೋಗ್ಯ ಇಲಾಖೆಯ ಹಿರಿಯ ನಿರೀಕ್ಷಣಾಧಿಕಾರಿಗಳಾದ ಮಂಜುಳ, ಅಬ್ದುಲ್ ವಹಾಬ್, ಸ್ತ್ರೀ ಶಕ್ತಿ ಸಂಘದ ತುಳಸಮ್ಮ, ಗ್ರಾಪಂ ಸದಸ್ಯರು ಇದ್ದರು.